# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ




ಬೆಂಗಳೂರಿನ ಬಸವನಗುಡಿಯಲ್ಲಿ ಸಮರ್ಥ ಭಾರತ ಸಂಸ್ಥೆ ಆಯೋಜಿಸಿದ್ದ 77ನೇ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ.ಮೋಹನ್ ಭಾಗವತ್ ಧ್ವಜಾರೋಹಣ ಮಾಡಿದರು.


ಸಂಪುಟ : 45 | ಸಂಚಿಕೆ : 10 | ನಿಜಶ್ರಾವಣ–ಭಾದ್ರಪದ | ಕಲಿಯುಗಾಬ್ದ 5125 | 01–09–2023 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4


## ಅಧ್ಯಾಪನ – ಕೇವಲ ವೃತ್ತಿಯಲ್ಲ, ಮೌಲ್ಯಾಧಾರಿತ ವ್ರತ

■ ಆರತಿ ಪಟ್ರಮೆ

ಅಜ್ಞಾನ ತಿಮಿರಾಂಧಸ್ಯ ಜ್ಞಾನಾಂಜನ ಶಲಾಕಯ ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀ ಗುರವೇ ನಮಃ! ಅಜ್ಞಾನವೆಂಬ ಕತ್ತಲೆಯಿಂದ ನಮ್ಮನ್ನು ಜ್ಞಾನವೆಂಬ ಬೆಳಕಿನೆಡೆಗೆ ಕರೆಯೊಯ್ಯುವ ಚಕ್ಷುವಿನಂತಹ ಗುರುಗಳಿಗೆ ನಮನ!

ನಮ್ಮ ಪೂರ್ವಜರು ಗುರುವಿನ ಸ್ಥಾನವನ್ನು ಎತ್ತರಿಸಿದ ಬಗೆ ಅದು. ಮಾತೃದೇವೋಭವ, ಪಿತೃ ದೇವೋಭವಗಳ ಜತೆಯಲ್ಲಿ ಆಚಾರ್ಯ ದೇವೋಭವ ಎಂದು ಕಾಣುವ ಸಂಸ್ಕೃತಿ ನಮ್ಮ ಹೆಮ್ಮೆ. ಬಹುಶಃ ಇನ್ನೂ ಈ ಸಂಸ್ಕೃತಿಯ ಬೇರುಗಳು ನಮ್ಮಲ್ಲಿ ಆಳವಾಗಿ ಬೇರೂರಿರುವುದರಿಂದಲೇ ಅಧ್ಯಾಪನವನ್ನು ವೃತ್ತಿಯನ್ನಾಗಿ ಪ್ರೀತಿಸುವ ಮಂದಿ ಅನೇಕರು ನಮ್ಮ ನಡುವೆ ಇದ್ದಾರೆ. ಇತರ ಎಲ್ಲ ವೃತ್ತಿಯನ್ನು ರೂಪಿಸುವ ವೃತ್ತಿಯೆಂದರೆ ಅದು ಶಿಕ್ಷಕರದು. ಇಂತಹ ಶಿಕ್ಷಕರ ದಿನಾಚರಣೆಯ ಹಿನ್ನೆಲೆಯಲ್ಲಿ ಪ್ರಸ್ತುತ ಶಿಕ್ಷಕ–ವಿದ್ಯಾರ್ಥಿಗಳ ನಡುವಿನ ಬಾಂಧವ್ಯ, ನವಯುಗದಲ್ಲಿ ಕಲಿಕಾ ಸಾಧ್ಯತೆಗಳು ಮತ್ತು ವೃತ್ತಿಯಾಗಿ ಅಧ್ಯಾಪನದ ಹೊಸಸಾಧ್ಯತೆಗಳನ್ನು ಸ್ವಲ್ಪ ಗಮನಿಸೋಣ.

ಶಿಕ್ಷಕರ ದಿನಾಚರಣೆಗಳು ಬಂದಾಗ ನೂರಾರು ಬಗೆಯ ಶುಭಾಶಯಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತವೆ. ಒಬ್ಬ ಶಿಕ್ಷಕ ಮತ್ತು ಒಂದು ಸೀಮೆಸುಣ್ಣದ ಕಡ್ಡಿ ದೇಶವನ್ನು ಬದಲಾಯಿಸಬಲ್ಲದು, ದೇಶವನ್ನು ರೂಪಿಸುವ ಶಿಲ್ಪಿ ಎಂದರೆ ಅದು ಶಿಕ್ಷಕರು ಎಂಬ ಗೌರವದ ಭಾವವು ಎಲ್ಲೆಡೆಯೂ ಕಾಣಿಸಿಕೊಳ್ಳುತ್ತದೆ. ಜೇಬು ತುಂಬಾ ಹಣ ಗಳಿಸುವಷ್ಟರ ಆಯ್ಕೆಗಳು ನಮ್ಮೆದುರಿಗಿದ್ದಾಗಲೂ ಅಧ್ಯಾಪನವನ್ನು ಆಯ್ಕೆ ಮಾಡಿಕೊಳ್ಳಬೇಕೆಂದರೆ ಮನಃಪೂರ್ವಕ ಶಿಕ್ಷಕರಾಗ ಬಯಸುವವರಿಂದ ಮಾತ್ರವೇ ಸಾಧ್ಯ. ನಿಜಕ್ಕೂ ನೋಡಿದಲ್ಲಿ ನೂರಾರು ಮಕ್ಕಳ ಮನೋಧರ್ಮವನ್ನು ಅರ್ಥಮಾಡಿಕೊಂಡು ಅವರಿಗೆ ಪಾಠಗಳನ್ನು ಬೋಧಿಸುವುದು, ಅವರೊಳಗಿನ ಪ್ರತಿಭೆಯ ಕಿರಣಗಳನ್ನು ಗುರುತಿಸಿ ಅದನ್ನು ಬೆಳಗುವಂತೆ ಮಾಡುವುದು ಅತ್ಯಂತ ಸವಾಲಿನ ಕೆಲಸ. ಇತರ ಎಲ್ಲ ಕ್ಷೇತ್ರಗಳಲ್ಲಿ ಕೊಡಮಾಡಲಾಗುವ ಸಂಬಳಕ್ಕಿಂತ ಹೆಚ್ಚಿನದನ್ನು ಉಪನ್ಯಾಸಕರಿಗೆ ಕೊಡುವಂತಾದಲ್ಲಿ ತಪ್ಪೇನಿಲ್ಲ. ಆದರೆ ಜಾಗತೀಕರಣವು ತಂದಿಟ್ಟ ಸಾವಿರಾರು ಅವಕಾಶಗಳು ಲಕ್ಷಾಂತರ ರೂಪಾಯಿಗಳನ್ನು ಗಳಿಸುವ ಉದ್ಯೋಗಗಳತ್ತ ಹೊಸ ತಲೆಮಾರಿನ ಮಂದಿಯನ್ನು ಆಕರ್ಷಿಸುತ್ತಿರುವಾಗ ಇನ್ನೂ ಸಾವಿರಗಳಲ್ಲಿ ಉಳಿದಿರುವ, ವರ್ಷದಿಂದ ವರ್ಷಕ್ಕೆ ಹೆಚ್ಚೇನೂ ಏರದ ಅಂಕೆಯ ಸಂಬಳಗಳ ನಡುವೆ ಕೆಲಸ ಮಾಡುವ ಸಹೃದಯಿಗಳಿದ್ದಾರೆ ಎಂದರೆ ಅವರು ಶಿಕ್ಷಣವನ್ನು ಪ್ರೀತಿಸುವವರಾಗಿದ್ದಾರೆ ಎಂಬುದು ಗಮನಾರ್ಹ. ಎಲ್ಲೂ ಸಲ್ಲದವರು ಇಲ್ಲಿ ಸಲ್ಲುವರಯ್ಯಾ ಎಂಬ ಭಾವವನ್ನೇನಾದರೂ ಯಾರಾದರೂ ಬೆಳೆಸಿಕೊಂಡರೆ ಅದು ಅವರ ಮೌಢ್ಯ ಎಂದು ವಿಷಾದದಿಂದ ಹೇಳಬೇಕಾಗುತ್ತದೆ.

ತಂತ್ರಜ್ಞಾನದ ಪ್ರಗತಿಯು ಮುಂದೊಂದು ದಿನ ಶಿಕ್ಷಕರ ಅಗತ್ಯವೇ ಇಲ್ಲದಂತೆ ಮಾಡಿಬಿಡಬಹುದೇನೋ ಎಂಬ ಗೊಂದಲವನ್ನು ಅನೇಕರು ವ್ಯಕ್ತ ಪಡಿಸಿದ್ದರು. ಬೇಕುಬೇಕಾದ್ದನ್ನು ಕೇಳಿದಂತೆ ವಿವರಿಸುವ ಅಲೆಕ್ಸಾ, ಸಿರಿಗಳ ನಡುವೆ ಗುರುವಿನದ್ದೇನು ಸ್ಥಾನ? ಮಕ್ಕಳಿಗೆ ತರಗತಿಯಲ್ಲಿ ಉಪನ್ಯಾಸಕರೋ ಗುರುಗಳೋ ಬೇಕೇ ಆಗುವುದಿಲ್ಲ ಎಂದು ಬಿಗುಮಾನದಿಂದ ಹೇಳುವಂಥವರೂ ಆನ್‌ಲೈನ್ ಶಿಕ್ಷಣದ ಅನಿವಾರ್ಯತೆ ಬಂದಲ್ಲಿಂದ ಶಿಕ್ಷಕರ ಮಹತ್ವ ಏನು ಎಂಬುದನ್ನು ಅರ್ಥ ಮಾಡಿಕೊಂಡಿದ್ದಾರೆ. ಗೂಗಲ್, ಇಂಟರ್‌ನೆಟ್ ಮಾಹಿತಿಯನ್ನು ಒದಗಿಸಬಹುದು. ಆದರೆ ಅದು ಕೊಡುವ ಸಾವಿರಾರು ಕೊಂಡಿಗಳ ನಡುವೆ ತಮಗೆ ಬೇಕಾದುದು ಏನೆಂಬುದನ್ನು ಮಕ್ಕಳು ಅರ್ಥಮಾಡಿಕೊಳ್ಳಬೇಕಾದರೆ ಗುರುಗಳು ಬೇಕೇ ಬೇಕು.

ಹಿಂದೆ ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ ಎಂಬುದನ್ನು ಜನ ಹೆಚ್ಚಾಗಿ ನಂಬಿದ್ದರು. ತಾತ್ವಿಕವಾಗಿ ಅದು ಹೌದಾದರೂ, ಮನಃಪೂರ್ವಕವಾಗಿ ಗುರುವನ್ನು ಒಪ್ಪಿಕೊಳ್ಳದ ಹೊರತು ವಿದ್ಯೆಯೆಂಬುದು ತಲೆಗೆ ಹತ್ತುವುದಿಲ್ಲ ಎಂಬುದು ನಿಜವಾದರೂ ವರ್ತಮಾನದ ಪರಿಸ್ಥಿತಿ ಮೊದಲಿಗಿಂತ ಕೊಂಚ




ಭಿನ್ನ. ಇಂದು ಗುರು–ಶಿಷ್ಯರ ನಡುವಿನ ಸಂಬಂಧವು ಪರಸ್ಪರ ಗೌರವದ ಮೇಲೆ ನಿಂತಿದೆ. ಮಕ್ಕಳನ್ನು ದಂಡಿಸಬಾರದು ಎಂಬಲ್ಲಿ ಕಲಿಕೆಯು ದುರ್ಬಲಗೊಳ್ಳಬೇಕೆಂದೇನಿಲ್ಲ, ಸ್ವತಃ ಗೌರವಿಸಲ್ಪಟ್ಟ ಮಗು ಇತರರನ್ನು ಗೌರವಿಸುವುದನ್ನು ಕಲಿಯುತ್ತದೆ ಎಂಬುದು ನಂಬಿಕೆ. ಬೆಳೆಯುತ್ತಾ ಬಂದಂತೆ ಗುರುವು ಸ್ನೇಹಿತನೇ ಆಗುತ್ತಾನೆ. ಪುರಾಣಗಳ ಕಾಲದಿಂದಲೂ ನಮ್ಮ ದೇಶದಲ್ಲಿ ಈ ಬಂಧವು ಇದ್ದುದು ಹೀಗೆಯೇ. ಪರಶುರಾಮ–ಭೀಷ್ಮರಾಗಿರಬಹುದು, ದ್ರೋಣ–ಅರ್ಜುನರಾಗಿರಬಹುದು, ಅಲ್ಲಿ ಗುರುವಿನ ಅಧಿಕಾರಕ್ಕಿಂತಲೂ ಶಿಷ್ಯರ ಮೇಲಿನ ಪ್ರೀತಿ ಗೌರವಗಳು ಅವರನ್ನು ಲೋಕೋತ್ತರ ವೀರರನ್ನಾಗಿಸಿದವು. ಗ್ರೀಕ್ ತತ್ವಜ್ಞಾನಿಗಳಾದ ಪ್ಲೇಟೋ ಅರಿಸ್ಟಾಟಲ್‌ಗಳ ಕಾಲದಲ್ಲಿಯೂ ಅವರೀರ್ವರ ನಡುವೆ ಸ್ನೇಹಪರ ಚರ್ಚೆಗಳಾಗುತ್ತಿದ್ದುದು ಸರ್ವವಿದಿತ. ಇಂದಿನ ದಿನಗಳಲ್ಲಿ ಗುರು–ಶಿಷ್ಯರ ನಡುವಿನ ಅಂತರವು ಮತ್ತಷ್ಟು ಕಡಿಮೆಯಾಗುತ್ತಾ ಸಾಗಿದೆ.

ಈರ್ವರ ನಡುವಿನ ಸಂವಹನವು ಮುಕ್ತವಾಗಿದ್ದಷ್ಟೂ ಹೆಚ್ಚು ಪರಿಣಾಮಕಾರಿಯಾಗುತ್ತದೆ. ನಿರ್ಭಯವಾಗಿ ತಮ್ಮ ಮನಸ್ಸಿನಲ್ಲಿ ಉದ್ಭವಿಸುವ ಪ್ರಶ್ನೆಗಳನ್ನು, ಅಥವಾ ವಿಷಯವೊಂದಕ್ಕೆ ಪೂರಕವಾಗಿ ತನ್ನ ಅನಿಸಿಕೆಗಳನ್ನು ಹೇಳಿಕೊಳ್ಳುವ ಸ್ವಾತಂತ್ರ್ಯವಿದ್ದಾಗ ಮಕ್ಕಳಲ್ಲಿ ಆತ್ಮವಿಶ್ವಾಸ ಹೆಚ್ಚುತ್ತದೆ. 'ಗುರುಗಳಲ್ಲಿ ಪ್ರಶ್ನಿಸಿ, ಗುರುವನ್ನು ಪ್ರಶ್ನಿಸಬೇಡಿ' ಎಂಬುದನ್ನು ಮಕ್ಕಳಿಗೆ ತಿಳಿಹೇಳಿದಲ್ಲಿ ಶಿಕ್ಷಣದ ಸಾಧ್ಯತೆಯು ಇನ್ನೊಂದು ಮಜಲಿಗೆ ವಿಸ್ತರಿಸಿಕೊಳ್ಳುತ್ತದೆ. ನಮ್ಮ ಎಳವೆಯಲ್ಲಿ ಬಹುಶಃ ಗುರುಗಳಲ್ಲಿ ಪ್ರಶ್ನೆಗಳನ್ನು ಕೇಳುವುದು ತಪ್ಪು ಎಂಬ ಸನ್ನಿವೇಶವಿತ್ತು. ಪ್ರಶ್ನಿಸಿದ್ದಕ್ಕಾಗಿ 'ಬಾಯಿ ಮುಚ್ಚಿ ಕುಳಿತುಕೋ' ಎಂದು ಗದರುತ್ತಿದ್ದವರೂ ಇದ್ದರು. ಆದರೆ ಮಕ್ಕಳಿಗೆ ಅತ್ಯಂತ ಆಪ್ತರಾಗುವವರೆಂದರೆ ತಮ್ಮ ಸಣ್ಣಪುಟ್ಟ ಪ್ರಶ್ನೆಗಳನ್ನೂ ಮಾನಿಸಿ ಉತ್ತರಿಸುವ ಗುರುಗಳು.

ಇಂದಿನ ದಿನಗಳಲ್ಲಿ ಶಿಕ್ಷಕವೃತ್ತಿಯನ್ನು ಆಯ್ದುಕೊಂಡವರ ಮುಂದಿರುವ ಬಲುದೊಡ್ಡ ಸವಾಲೆಂದರೆ ವಿದ್ಯಾರ್ಥಿಗಳಿಗೆ ಬೋಧನೆಯ ಜತೆಗೆ ಪ್ರೇರಣೆಯನ್ನು ಒದಗಿಸುವುದು. ಮಕ್ಕಳ ಹಿನ್ನೆಲೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳುವ ಮನಸ್ಥಿತಿ ಶಿಕ್ಷಕರಲ್ಲೂ ಇದ್ದಾಗ ಬದುಕಿಗೆ ಬೇಕಾದ ಮೌಲ್ಯಗಳನ್ನು ತನ್ನಿಂತಾನಾಗಿ ಶಿಕ್ಷಕರು ಕಲಿಸಬಲ್ಲರು. ಅದೇ ರೀತಿಯಲ್ಲಿ ತಮ್ಮ ಶಿಕ್ಷಕರು ಬೆಳೆದು ಬಂದ ರೀತಿಯ ಅರಿವು ಮಕ್ಕಳಿಗೂ ಇದ್ದಾಗ ಅವರನ್ನು ತಮ್ಮ ರೋಲ್ ಮಾಡೆಲ್ಲುಗಳಾಗಿ ಮಕ್ಕಳು ಸ್ವೀಕರಿಸಿಯೇ ಸ್ವೀಕರಿಸುತ್ತಾರೆ. ಕಳೆದ ಕೆಲವು ವರ್ಷಗಳಲ್ಲಿ ಬಂದಂಥ ಹಿಂದಿ ಸಿನೆಮಾಗಳು ಈ ದೃಷ್ಟಿಕೋನವನ್ನು ಪುರಸ್ಕರಿಸುತ್ತವೆ. ತಾರೇ ಜಮೀನ್ ಪರ್, ಹಿಚ್ಕಿ, ರಫ್ ಬುಕ್ ಇತ್ಯಾದಿಗಳು ನಿಜವಾಗಿಯೂ ನಮ್ಮ ಬದುಕಿನಲ್ಲಿ ಶಿಕ್ಷಕರ ಪಾತ್ರವೇನು ಎಂಬುದರ ಜತೆಗೆ ತಮ್ಮನ್ನು ಅರ್ಥಮಾಡಿಕೊಳ್ಳಬಲ್ಲ ಶಿಕ್ಷಕರಿಂದ ಬದುಕಿನ ಪಥವು ಔನ್ನತ್ಯದ ಕಡೆಗೆ ಸಾಗುತ್ತದೆ ಎಂಬುದನ್ನು ತೋರಿಸಿಕೊಟ್ಟಿವೆ. ಇಂಥ ಶಿಕ್ಷಕರು ಕುತೂಹಲದ ಕಿಡಿಯನ್ನು ಹೊತ್ತಿಸಿ, ಕಲಿಕೆಗೆ ಬೇಕಾದ ಪ್ರೀತಿಯನ್ನು ಮಕ್ಕಳಲ್ಲಿ ಬೆಳೆಸಬಲ್ಲರು. ವಿಮರ್ಶಾತ್ಮಕವಾಗಿ ಯೋಚಿಸುವುದನ್ನು, ತರ್ಕಬದ್ಧವಾಗಿ ಚಿಂತಿಸುವುದನ್ನು ಬೆಂಬಲಿಸಬಲ್ಲರು.

ತನ್ನ ವಿದ್ಯಾರ್ಥಿಯಲ್ಲಿ ಅಡಕವಾಗಿರುವ ಸಾಮರ್ಥ್ಯಗಳೇನು ಮತ್ತು ಆ ಮಗು ಸುಧಾರಿಸಬೇಕಾಗಿರುವ ಅಂಶಗಳೇನು ಎಂಬುದನ್ನು ಒಬ್ಬ ಸಮರ್ಥ ಶಿಕ್ಷಕ ಅರ್ಥ ಮಾಡಿಕೊಳ್ಳುತ್ತಾನಾದ್ದರಿಂದ ಇಂದು ಶಿಕ್ಷಕನ ಹೊಣೆಗಾರಿಕೆ ಮತ್ತಷ್ಟು ಹೆಚ್ಚಿದೆ. ತಾನು ತಲುಪಬಲ್ಲ ಗುರಿಯನ್ನು ಯೋಜಿಸುವುದರಿಂದ ತೊಡಗಿ, ದೈನಂದಿನ ಪ್ರಗತಿಯನ್ನು ಗಮನಿಸುತ್ತ, ಮಕ್ಕಳಿಗೆ ಉತ್ತೇಜನವನ್ನು ನೀಡುವ ಶಿಕ್ಷಕರು ನಿಜಾರ್ಥದಲ್ಲಿಯೂ ಮಾರ್ಗದರ್ಶಕರಾಗಿ ಹೊರಹೊಮ್ಮುತ್ತಾರೆ. ಕೋವಿಡ್ ದಿನಗಳಲ್ಲಿ ಆನ್‌ಲೈನ್ ಶಿಕ್ಷಣಕ್ಕೆ ಏಕಾಏಕಿಯಾಗಿ ಬದಲಾಗುವುದು ಬಹುತೇಕರಿಗೆ ಸಾಧ್ಯವಿರಲಿಲ್ಲ. ಸಾಮಾನ್ಯವಾಗಿ ತಮ್ಮೆದುರು ಮಕ್ಕಳ ಕಲರವ ಇದ್ದರಷ್ಟೇ ಶಿಕ್ಷಕರಿಗೆ ಬೋಧನೆಗೆ ಉತ್ತೇಜನವಿರುತ್ತದೆ. ಆದರೆ ಸ್ವಪ್ರೇರಣೆಯನ್ನು ಚೈತನ್ಯವಾಗಿರಿಸಿಕೊಂಡು, ಮಕ್ಕಳು ದಿನಂಪ್ರತಿ ಪಾಠಗಳನ್ನು ಕೇಳುವಂತಾಗಲಿಯೆಂದು ತೊಡಗಿಸಿಕೊಂಡದ್ದು ಅವರ ಹೆಚ್ಚುಗಾರಿಕೆಯೇ. ಡಾರ್ವಿನ್ನನ ಸಿದ್ಧಾಂತವು ಇಲ್ಲಿಗೂ ಅನ್ವಯಿಸಿತು. ಸಮರ್ಥರಾದವರು ಉಳಿದುಕೊಂಡರು.

ಎಲ್ಲದಕ್ಕಿಂತಲೂ ಹೆಚ್ಚು ಇಂದಿನ ದಿನಗಳಲ್ಲಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ನಡುವೆ ಬಂಧವು ಹೆಚ್ಚುತ್ತಿರುವುದಕ್ಕೆ ಕಾರಣ ಮನೆಯಲ್ಲಿ ದೊರೆಯದ ಭಾವನಾತ್ಮಕವಾದ ಬೆಂಬಲವನ್ನು ಶಿಕ್ಷಕರು ನೀಡುತ್ತಿರುವುದು. ಎಷ್ಟೋ ಮಕ್ಕಳಿಗೆ ಮನೆಯಲ್ಲಿ ತಾಯ್ತಂದೆಯರಿಬ್ಬರೂ ತಮ್ಮ ವೃತ್ತಿಯ ಒತ್ತಡದಲ್ಲಿ ಕಳೆದು ಹೋದಂತ ಪರಿಸ್ಥಿತಿಯಲ್ಲಿ ಬೇಕಾಗುವ ವಾತ್ಸಲ್ಯವನ್ನು ತಮ್ಮ ಗುರುಗಳಿಂದಲೇ ಪಡೆದುಕೊಳ್ಳುತ್ತಿದ್ದಾರೆ. ಗುರುವಾದವರು ತಾಯಿಯಪಾತ್ರವನ್ನೋ ತಂದೆಯ ಪಾತ್ರವನ್ನೋ ವಹಿಸಿಕೊಂಡು ಬದುಕಿಗೆ ಬೇಕಾದ ಬೆಂಬಲವನ್ನು ನೀಡುತ್ತಿದ್ದಾರೆ ಎಂದರೆ ಉತ್ಪ್ರೇಕ್ಷೆಯಲ್ಲ. ಸಾಧನೆಯನ್ನು ಸಂಭ್ರಮಿಸುವ, ಸೋಲನ್ನು ಗೆಲುವಿನ ಮೆಟ್ಟಿಲನ್ನಾಗಿ ಸ್ವೀಕರಿಸುವ ಮನೋಭಾವವನ್ನು ಬೆಳೆಸುವ ಶಿಕ್ಷಕರಿಗಿಂತ ಬೇರೇನು ಬೇಕು?

ಕಲಿಕೆಯಲ್ಲಿ ಮುಂದಿರುವವರು ಶಿಕ್ಷಕರಾಗಬೇಕೆಂಬ ಕನಸುಗಳನ್ನು ಮತ್ತೆ ಮೊಳೆಯಿಸುವ, ಬೆಳೆಸುವ, ಗೌರವಿಸುವ ಮನಸ್ಥಿತಿ ಇನ್ನಷ್ಟು ಭದ್ರವಾದರೆ ಗುಣಾತ್ಮಕ ಶಿಕ್ಷಣವನ್ನು, ಕಲಿಕೆಯನ್ನು ನಾವು ಉತ್ತೇಜಿಸಬಹುದು. ಅಧ್ಯಾಪನವೆಂದರೆ ಶ್ರೇಷ್ಠವೃತ್ತಿಯೆಂಬುದನ್ನು ಇಂದಿನ ಮಕ್ಕಳೂ ಅರ್ಥಮಾಡಿಕೊಳ್ಳುವುದು ಅಗತ್ಯ. ಎಲ್ಲರೂ ಕೇವಲ ಡಾಕ್ಟರಾಗಬೇಕು, ವೈದ್ಯರಾಗಬೇಕು ಎಂದಷ್ಟೇ ಪೋಷಕರು ಒತ್ತಡ ಹೇರದೇ ಅಧ್ಯಾಪನವೂ ಅತ್ಯಂತ ಗೌರವಯುತವಾದದ್ದು ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಯುಟ್ಯೂಬಿನಲ್ಲಿ ಲಭ್ಯವಿರುವ ಅನೇಕ ಚಾನೆಲ್ಲುಗಳಲ್ಲಿನ ಶಿಕ್ಷಕರು ಮಕ್ಕಳಿಗೆ ಬಹಳ ಹತ್ತಿರವಾಗಿದ್ದಾರೆ, ನೇರವಾಗಿ ನೋಡಿಗೊತ್ತಿಲ್ಲದಿದ್ದರೂ ಅವರು ನಮ್ಮ ಮೇಷ್ಟರೇ ಎಂಬ ಅಭಿಮಾನವನ್ನು ಬೆಳೆಸಿಕೊಂಡಿದ್ದಾರೆ. ಇದಲ್ಲವೇ ಬೋಧಕರ ಸಾಮರ್ಥ್ಯ?

ಇವೆಲ್ಲದರ ನಡುವೆ ಉನ್ನತ ಹಂತಗಳಲ್ಲಿ ಬೋಧಿಸುವ ಕೆಲವು ಮಂದಿ ತಮ್ಮ ಅಧ್ಯಾಪನದ ಸಂಕಲ್ಪವನ್ನು ಮರೆತಂತೆ ವರ್ತಿಸುವವರೂ ಇದ್ದಾರೆ. ಬಹುಶಃ ಉತ್ತಮ ನಿರ್ವಹಣೆ ತೋರದವರನ್ನು ಖಾಸಗಿ ಸಂಸ್ಥೆಗಳಲ್ಲಿ ಮುಂದುವರಿಯಗೊಡದಂತೆ ಸರಕಾರೀ ಶಾಲಾಕಾಲೇಜುಗಳಲ್ಲೂ ನಿಯಮಗಳಿರಬೇಕು. ತಮ್ಮ ಕೆಲಸವನ್ನು ದೇವರ ಕೆಲಸ ಎಂದುಕೊಂಡು ಶ್ರದ್ಧಾಭಕ್ತಿಗಳಿಂದ ನಡೆದುಕೊಳ್ಳದೇ ಕೇವಲ ಸಂಬಳದ ಮುಖನೋಡುವಂತಹ ಮಂದಿಗಳು ಆತ್ಮಾವಲೋಕನ ಮಾಡಿಕೊಳ್ಳುವಂತಾಗಬೇಕು. ಮಕ್ಕಳಿಗೆ ಸ್ವತಃ ಗೌರವ ಬೆಳೆಯುವಂತೆ ಗುರುಗಳ ನಡವಳಿಕೆಯೂ ಇರಬೇಕು. ದುಶ್ಚಟಗಳು, ದುರ್ವರ್ತನೆಗಳು ಮನುಷ್ಯನನ್ನು ಹಾಳುಗೆಡಹುತ್ತವೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.

ಈ ವರ್ಷದ ಶಿಕ್ಷಕರ ದಿನಾಚರಣೆಯು ಶಿಕ್ಷಣದ ಹೊಸಸಾಧ್ಯತೆಗಳನ್ನು ನಮಗೆಲ್ಲರಿಗೂ ಅರ್ಥ ಮಾಡಿಸಲಿ. ಶಿಕ್ಷಕರಿಗೆ ಅರ್ಹವಾಗಿಯೇ ದೊರಕಬೇಕಾದ ಗೌರವಗಳು ದೊರಕಲಿ.

# ಸಂಸ್ಮರಣೆ ಸರ್.ಎಂ. ವಿಶ್ವೇಶ್ವರಯ್ಯ (15 ಸೆಪ್ಟೆಂಬರ್, 1861–14 ಎಪ್ರಿಲ್, 1962)



ಸೆಪ್ಟೆಂಬರ್ 15, 1861ರಲ್ಲಿ ಕರ್ನಾಟಕದ ಮುದ್ದೇನಹಳ್ಳಿ ಎಂಬ ಪುಟ್ಟ ಹಳ್ಳಿಯಲ್ಲಿ ಜನಿಸಿದ ವಿಶ್ವೇಶ್ವರಯ್ಯನವರು ಬಹುಪ್ರತಿಭೆಯಾಗಿದ್ದರು. ಅವರು ನಿಷ್ಣಾತ ಇಂಜಿನಿಯರ್ ಮಾತ್ರರಲ್ಲದೆ ಅತ್ಯುತ್ತಮ ಆಡಳಿತಗಾರ ಮತ್ತು ದೂರದೃಷ್ಟಿಯ ಚಿಂತಕರಾಗಿದ್ದರು. ಅವರು ಸಮಾಜಕ್ಕೆ ಕೊಟ್ಟ ಕೊಡುಗೆಗಳ ಪ್ರಭಾವ ಎಷ್ಟು ಗಾಢವಾಗಿದೆ ಎಂದರೆ ಭಾರತ ಮತ್ತು ಅದರಾಚೆಗೂ ಇಂಜಿನಿಯರ್‌ಗಳ ಹೊಸ ತಲೆಮಾರುಗಳು ಬರುವಲ್ಲಿ ಅದು ಪ್ರೇರಣೆಯಾಯಿತು.

ಪುಣೆಯ ಕಾಲೇಜ್ ಆಫ್ ಇಂಜಿನಿಯರಿಂಗ್‌ನಲ್ಲಿ ಶಿಕ್ಷಣವನ್ನು ಪೂರ್ಣಗೊಳಿಸಿದ ನಂತರ, ವಿಶ್ವೇಶ್ವರಯ್ಯ ಅವರು ಬಾಂಬೆಯ (ಈಗ ಮುಂಬೈ) ಲೋಕೋಪಯೋಗಿ ಇಲಾಖೆಯಲ್ಲಿ ಸಹಾಯಕ ಇಂಜಿನಿಯರ್ ಆಗಿ ತಮ್ಮ ವೃತ್ತಿಜೀವನವನ್ನು ಪ್ರಾರಂಭಿಸಿದರು. 1894ರಲ್ಲಿ ಮೈಸೂರು ರಾಜ್ಯದ ಮುಖ್ಯ ಇಂಜಿನಿಯರ್ ಆಗಿ ನೇಮಕಗೊಂಡ ಅವರು 20 ವರ್ಷಗಳ ಕಾಲ ಈ ಹುದ್ದೆಯಲ್ಲಿದ್ದರು. ಅವರ ಅಧಿಕಾರಾವಧಿಯಲ್ಲಿ ಮೈಸೂರಿನ ಮೂಲಸೌಕರ್ಯ ಮತ್ತು ಆರ್ಥಿಕತೆಗೆ ಮಹತ್ವ ನೀಡಿದರು. ಕೃಷ್ಣರಾಜ ಸಾಗರ ಅಣೆಕಟ್ಟನ್ನು ಒಳಗೊಂಡಂತೆ ಹಲವಾರು ಸಾಂಪ್ರದಾಯಿಕ ರಚನೆಗಳನ್ನು ವಿನ್ಯಾಸಗೊಳಿಸಿದರು ಮತ್ತು ನಿರ್ಮಿಸಿದರು. ಇದು ಸುತ್ತಮುತ್ತಲ ದೊಡ್ಡ ಪ್ರದೇಶಗಳಿಗೆ ನೀರಾವರಿ ಮಾಡಲು ಮತ್ತು ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ಸಹಾಯ ಮಾಡಿತು.

ಮೈಸೂರಿನಲ್ಲಿ ಸಾಕ್ಷರತೆ ಮತ್ತು ಶಿಕ್ಷಣವನ್ನು ಉತ್ತೇಜಿಸಲು ಅವಿರತವಾಗಿ ಶ್ರಮಿಸಿದರು ಮತ್ತು ಬೆಂಗಳೂರಿನಲ್ಲಿ ಇಂಜಿನಿಯರಿಂಗ್ ಕಾಲೇಜನ್ನು ಸ್ಥಾಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಇಂದು ಅದಕ್ಕೆ ಅವರ ಹೆಸರಿಡಲಾಗಿದೆ. ಹಾಗೆಯೇ ಬೆಂಗಳೂರು ಸ್ಯಾನಿಟರಿ ಬೋರ್ಡ್ ಸ್ಥಾಪನೆ ಮತ್ತು ಹಲವಾರು ಕೊಳಚೆನೀರು ಸಂಸ್ಕರಣಾ ಘಟಕಗಳ ನಿರ್ಮಾಣ ಸೇರಿದಂತೆ ಸಾರ್ವಜನಿಕ ಆರೋಗ್ಯ ಮತ್ತು ನೈರ್ಮಲ್ಯ ಕ್ಷೇತ್ರಗಳಲ್ಲಿ ಸರ್‌ಎಂವಿ ಹಲವಾರು ಸುಧಾರಣೆಗಳನ್ನು ಪರಿಚಯಿಸಿದರು. ಅವರು 1923ರಲ್ಲಿ ಭಾರತೀಯ ವಿಜ್ಞಾನ ಕಾಂಗ್ರೆಸ್‌ನ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದರು.

ಲೇಖಕ ವಿಶ್ವೇಶ್ವರಯ್ಯ: Nation Building ಎಂಬ ಪುಸ್ತಕದಲ್ಲಿ ಭಾರತದಲ್ಲಿ ಆರ್ಥಿಕ ಅಭಿವೃದ್ಧಿಗಾಗಿ ಅವರ ದೃಷ್ಟಿಕೋನ ಮತ್ತು ಕಾರ್ಯತಂತ್ರವನ್ನು ವಿವರಿಸಿದ್ದಾರೆ. ಐದು ವರ್ಷಗಳ ಅವಧಿಯಲ್ಲಿ ಭಾರತದ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ ವಿವರವಾದ ಯೋಜನೆಯನ್ನು ಪ್ರಸ್ತುತಪಡಿಸುತ್ತದೆ.

Planned Economy for India ಎಂಬ ಪುಸ್ತಕದಲ್ಲಿ ಮೈಸೂರು ರಾಜ್ಯದ ದಿವಾನರಾಗಿ ಜಾರಿಗೆ ತಂದ ಯಶಸ್ವಿ ಆರ್ಥಿಕ ಅಭಿವೃದ್ಧಿ ನೀತಿಗಳನ್ನು ಚರ್ಚಿಸಿದ್ದಾರೆ ಮತ್ತು ಆರ್ಥಿಕ ಅಭಿವೃದ್ಧಿಯಲ್ಲಿ ಯೋಜನೆ ಮತ್ತು ನಾವೀನ್ಯತೆಯ ಮಹತ್ವದ ಕುರಿತು ತಮ್ಮ ಒಳನೋಟಗಳನ್ನು ಹಂಚಿಕೊಂಡಿದ್ದಾರೆ.

ಲೀಗ್ ಆಫ್ ನೇಷನ್ಸ್‌ಗೆ ಭಾರತದ ಪ್ರತಿನಿಧಿಯಾಗಿ ಸೇವೆ ಸಲ್ಲಿಸಿದರು ಮತ್ತು ಅಂತರ್ಯುದ್ಧದ ಅವಧಿಯಲ್ಲಿ ಭಾರತದ ವಿದೇಶಾಂಗ ನೀತಿಯನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. 1931 ರಲ್ಲಿ ಇಂಜಿನಿಯರಿಂಗ್ ವೃತ್ತಿಗೆ ನೀಡಿದ ಕೊಡುಗೆಗಳನ್ನು ಗುರುತಿಸಿ ಅಮೇರಿಕನ್ ಸೊಸೈಟಿ ಆಫ್ ಸಿವಿಲ್ ಇಂಜಿನಿಯರ್ಸ್‌ನ ಗೌರವ ಸದಸ್ಯತ್ವವನ್ನು ನೀಡಲಾಯಿತು. ಸರ್ ಎಂ. ವಿಶ್ವೇಶ್ವರಯ್ಯ ಅವರು 1955ರಲ್ಲಿ ಭಾರತದ ಅತ್ಯುನ್ನತ ನಾಗರಿಕ ಗೌರವವಾದ ಭಾರತ ರತ್ನವನ್ನು ಪಡೆದರು. 1968ರಿಂದ ಭಾರತದಲ್ಲಿ ಇವರ ಜನ್ಮದಿನವನ್ನು ರಾಷ್ಟ್ರೀಯ ಎಂಜನಿಯರ್ ದಿನವಾಗಿ ಆಚರಿಸಲಾಗುತ್ತಿದೆ.

## ಪರರಿಗಾಗಿ ಬದುಕುವ ಬದುಕೇ ನಿಜವಾದ ಬದುಕು

ಸೇವಾಗಾಥಾ

ಹದಿನೆಂಟು ವರ್ಷಗಳ ಹಿಂದಿನ ಕಥೆಯಿದು. 01–08–2005ರಂದು ಇಂದೋರಿನಲ್ಲಿ ಧಾರಾಕಾರವಾಗಿ ಸುರಿದ ಮಳೆಯಿಂದಾಗಿ, ತಗ್ಗು ಪ್ರದೇಶಗಳಿಗೆ ಒಮ್ಮೆಲೇ ನೀರು ನುಗ್ಗಿತು. ಮಾರುತಿನಗರವು ಬಾಣಗಂಗಾ ಪ್ರದೇಶದ ಸಾವೇರ್ ರಸ್ತೆಬದಿಯ ತಗ್ಗು ಪ್ರದೇಶಗಳಲಲ್ಲಿರುವ ಒಂದು ಬಸತಿ. ಅಲ್ಲಿನ ಮನೆಗಳಿಗೆ ನೀರು ನುಗ್ಗಿದ ರಭಸಕ್ಕೆ ಬೆಚ್ಚಿದ ಜನರು, ತಂತಮ್ಮ ಚಿಕ್ಕಮಕ್ಕಳನ್ನು ಉಳಿಸಿಕೊಳ್ಳಲು ಹೆಣಗತೊಡಗಿದರು. ಸರ್ಕಾರಿ ಆಡಳಿತಯಂತ್ರ ಸಹಾಯಕ್ಕೆ ಧಾವಿಸುವ ಮುನ್ನವೇ, ಅಲ್ಲಿನ ನಿತ್ಯಶಾಖೆಯ ಹೊಣೆ ಹೊತ್ತಿದ್ದ ಮನೋಜ ರಕ್ಷಣಾ ಕಾರ್ಯಕ್ಕೆ ಧುಮುಕಿದ್ದ. ಬಬನ್ ಪಾಂಡೆ, ಸುರೇಶ್ ಬಾಥಾ ಮುಂತಾದವರೂ ಮನೋಜನೊಂದಿಗೆ ಕೈಜೋಡಿಸಿದರು. ಈ ಯುವಕರ ತಂಡ ಸಂತ್ರಸ್ತರ ಜೀವವುಳಿಸುವ ಕೆಲಸದಲ್ಲಿ ಮುಳುಗಿತು.



ಜಲಾವೃತಗೊಂಡ ಮನೆಗಳಿಂದ ಪುಟ್ಟ ಕಂದಮ್ಮಗಳನ್ನು ಹೊತ್ತುಕೊಂಡು ಸುರಕ್ಷಿತ ತಾಣಕ್ಕೆ ತಲುಪಿಸುತ್ತಿದ್ದ ಮನೋಜನ ಮನದಲ್ಲಿ ಆರ್‌ಎಸ್‌ಎಸ್‌ನ ನಗರ ಸಂಪರ್ಕ ಪ್ರಮುಖರಾಗಿದ್ದ ಡಾ. ಆನಂದ್ ಪ್ರಕಾಶ್ ಮಿಶ್ರಾರ ಎಚ್ಚರಿಕೆ ಮಾರ್ದನಿಸುತ್ತಿತ್ತು. “ಮನೋಜಾ, ನಿನ್ನ ಹೃದಯದ ಕವಾಟಗಳ ಪರಿಸ್ಥಿತಿ ಹದಗೆಟ್ಟಿದೆ ಕಣೋ. ನೀರಿಗಿಳಿಯಲೇಬೇಡ ಮತ್ತು ಸುಸ್ತಾಗುವಷ್ಟು ಶ್ರಮ ಪಡಬೇಡ. ಹೃದಯದ ಮೇಲೆ ಒತ್ತಡ ಬಿದ್ದರೆ, ಪ್ರಾಣಕ್ಕೇ ಎರವಾಗಬಹುದು, ಮಗೂ” ಎಂದಿದ್ದರು ಡಾಕ್ಟರ್. ಪದೇ ಪದೇ ನೆನಪಾಗುತ್ತಿದ್ದ ಈ ಮಾತುಗಳಿಗೆ ಗಮನಕೊಡದೆ ಮನೋಜ ಸಂತ್ರಸ್ತ ಕುಟುಂಬಗಳ ರಕ್ಷಣಾಕಾರ್ಯದಲ್ಲಿ, ಮುಂಜಾವಿನ 4 ಗಂಟೆಯಿಂದ ಮಧ್ಯರಾತ್ರಿ 12ರವರೆಗೆ ಅವಿಶ್ರಾಂತವಾಗಿ ದುಡಿದಿದ್ದ. ಕೇವಲ ಬಿದಿರುಕೋಲು ಹಾಗೂ ತಗಡಿನ ಡಬ್ಬಗಳನ್ನು ಬಳಸಿ 18 ಕಂದಮ್ಮಗಳನ್ನು ಅಕ್ಷರಶಃ ಸಾವಿನ ದವಡೆಯಿಂದ ಮನೋಜ್ ಬಿಡಿಸಿಕೊಂಡು ಬಂದಿದ್ದ.

ಈ ವೇಳೆಗೆ ರಾಷ್ಟ್ರಭಕ್ತ ನವತರುಣನ ಶ್ವಾಸಕೋಶಗಳಲ್ಲಿ ನೀರು ತುಂಬಲಾರಂಭಿಸಿತ್ತು. ಅದನ್ನೂ ನಿರ್ಲಕ್ಷಿಸುತ್ತ, ಸಂತ್ರಸ್ತರಿಗಾಗಿ ಅಗತ್ಯ ವಸ್ತುಗಳ ಪಟ್ಟಿ ಮಾಡಿದ ಮನೋಜ, ಅವುಗಳ ವಿಲೇವಾರಿ ಮಾಡುತ್ತ ಮರುದಿನವಿಡೀ ಓಡಾಡಿದ. ಆ ವಿಪರೀತ ದಣಿವನ್ನು ಮನೋಜನ ಶರೀರ ತಾಳದಾಯಿತು. ಆಸ್ಪತ್ರೆಗೆ ದಾಖಲಿಸಿದರೂ ಚಿಕಿತ್ಸೆ ಫಲಕಾರಿಯಾಗದೆ ನ್ಯುಮೋನಿಯಾ ಉಲ್ಬಣಿಸಿ ಮನೋಜ ಕೊನೆಯುಸಿರೆಳೆದ. ದಿವ್ಯಾಂಗರಾಗಿದ್ದ ತಂದೆ ಉಮ್ರಾವ್ ಸಿಂಗ್ ಚೌಹಾಣ್, ಮಾನಸಿಕ ದೌರ್ಬಲ್ಯದಿಂದ ಬಳಲುತ್ತಿದ್ದ ಸೋದರ ಸೋನು ಮತ್ತು ಬಿಕ್ಕಳಿಸಿ ಅಳುತ್ತಿದ್ದ ತಾಯಿಯನ್ನು ಮನೋಜ ಬಿಟ್ಟಗಲಿದಾಗ ಇಡೀ ಮಾರುತಿನಗರಕ್ಕೆ ಎರಡು ದಿನ ಸೂತಕ ಆವರಿಸಿತ್ತು. “ಆ ಹುಡುಗ ದೇವದೂತನಂತೆ ಬಂದು, ತನ್ನ ಪ್ರಾಣ ಪಣಕ್ಕಿಟ್ಟು, ಏಳು ವರ್ಷದ ನನ್ನ ಮೊಮ್ಮಗನನ್ನು ನೀರಿನ ಸುಳಿಯಿಂದ ಬಿಡಿಸಿ ತಂದ” ಎನ್ನುತ್ತ ಕಣ್ಣೀರಾಗುತ್ತಾರೆ, ಮಾರುತಿನಗರದ ನಿವಾಸಿ ಲಕ್ಷ್ಮೀದೇವಿ. ಅಂತ್ಯಕಾಲದಲ್ಲಿಯೂ ಸಂತ್ರಸ್ತರ ಹೆಸರು ಮತ್ತು ಅವರ ಅಗತ್ಯ ವಸ್ತುಗಳ ಪಟ್ಟಿ ಮನೋಜನ ಕಿಸೆಯಲ್ಲಿ ದೊರಕಿತ್ತು.

ಮನೋಜ ಕಾಲವಾಗಿ ಎರಡು ವರ್ಷಗಳ ನಂತರ ಅಂದರೆ 2007ರ ಗಣರಾಜ್ಯೋತ್ಸವದಂದು ಭಾರತೀಯ ಬಾಲಕಲ್ಯಾಣ ಪರಿಷತ್ತು ಮನೋಜ ಚೌಹಾಣನಿಗೆ ಅಪ್ರತಿಮ ಶೌರ್ಯಪ್ರಶಸ್ತಿ ನೀಡಿ ಗೌರವಿಸಿತು. ಮನೋಜನ ಮನೋಜ್ಞ ಬಲಿದಾನವು, ಇಂದಿನ ಯುವಕರಿಗೆ ದೇಶಕ್ಕಾಗಿ ಬದುಕಲು ಪ್ರೇರಣೆ.

## ಎಲ್ಲೋ ಕೇಳಿದ ಕಥೆ

### ಊಟಕ್ಕಾಗಿ ಬದುಕಲ್ಲ, ಬದುಕಿಗಾಗಿ ಊಟ

ತಮ್ಮ ಖಾಸಗಿ ಕೆಲಸವೊಂದರ ಸಲುವಾಗಿ ಡಾಕ್ಟರ್‌ಜಿ ಒಮ್ಮೆ ಮುಂಬಯಿಗೆ ಬಂದಿದ್ದರು. ಆಗ ಆ ನಗರದಲ್ಲೆಲ್ಲ ‘ಫ್ಲೂ’ ಕಾಯಿಲೆಯದೇ ಹಾವಳಿ. ಡಾಕ್ಟರ್‌ಜಿಯವರನ್ನೂ ಅದು ಬಿಡಲಿಲ್ಲ. ಅಷ್ಟೇ ಅಲ್ಲ. ಅವರ ವಸತಿ ವ್ಯವಸ್ಥೆಯಾಗಿದ್ದ ಅಲ್ಲಿನ ಸಂಘಚಾಲಕ ಶ್ರೀ ದಾದಾಸಾಹೇಬ ನಾಯಕ್ ಅವರ ಮನೆಯಲ್ಲೂ ಹಲವರು ಹಾಸಿಗೆ ಹಿಡಿದಿದ್ದರು. ಡಾಕ್ಟರ್‌ಜಿಯವರನ್ನು ಕಾಣಲು ಸಾಂಗಲಿಯಿಂದ ಬಂದಿದ್ದ ಶ್ರೀ ಕಾಶಿನಾಥಪಂತ ಲಿಮಯೇ ಅವರಿಗೂ ಅದು ಅಂಟಿಕೊಂಡಿತು. ಅವರೂ ಅದೇ ಮನೆಯಲ್ಲಿ ಹಾಸಿಗೆ ಹಿಡಿದರು. ಹೀಗಾಗಿ ಡಾಕ್ಟರ್‌ಜಿಯವರು ಮುಂಬಯಿಗೆ ಬಂದ ಉದ್ದೇಶವಂತೂ ಸಫಲವಾಗಲಿಲ್ಲ. ಒಂದು ವಾರ ವ್ಯರ್ಥವಾಯಿತು ಅಷ್ಟೆ. ಈ ಬಗ್ಗೆ ಅವರು ನಾಗಪುರಕ್ಕೆ ಬರೆದಿದ್ದ ಪತ್ರದಲ್ಲಿ ಬಂದ ಉದ್ದೇಶ ಈಡೇರದಿದ್ದರೂ, ಇಲ್ಲಿ ‘ಫ್ಲೂ ವಾರ’ ಆಚರಿಸಲು ಸಾಧ್ಯವಾಯಿತೆಂದು ವಿನೋದಪೂರ್ಣವಾಗಿ ಬರೆದಿದ್ದರು.

ಕಾಯಿಲೆ ವಾಸಿಯಾದ ನಂತರವೂ ಎರಡು ದಿನಗಳ ಕಾಲ ದ್ರವರೂಪ ಆಹಾರದಲ್ಲೇ ಅವರು ಮುಂದುವರಿಯಬೇಕಾಯಿತು. ನಂತರವಾದರೂ ಅಷ್ಟೇ. ಮನೆಯಲ್ಲಿ ಅಡಿಗೆ ಮಾಡುವವರು, ಆರೈಕೆ ಮಾಡುವವರು, ಎಲ್ಲರದೂ ಶರೀರ ಹಿಂಡಿದಂತಾಗಿ ನಿಶ್ಶಕ್ತರಾಗಿದ್ದ ಹಿನ್ನೆಲೆಯಲ್ಲಿ ಸಮೀಪದ ‘ಹೋಮ್ಲಿ ಕ್ಲಬ್’ನಿಂದ ಭೋಜನ ತರಿಸಲಾಗುತ್ತಿತ್ತು. ಒಂದು ದಿನ ಊಟ ತರುತ್ತಿದ್ದ ಸ್ವಯಂಸೇವಕ ಭೋಜನದ ಡಬ್ಬದ ಜೊತೆ ಉಪ್ಪನ್ನು ತರಲು ಮರೆತಿದ್ದ. ಇದರಿಂದಾಗಿ ದಾದಾಜಿಯವರು ಗರಂ ಆಗಿ ಅವನನ್ನು ತರಾಟೆಗೆ ತೆಗೆದುಕೊಂಡಿದ್ದರು. ಆಗ ಡಾಕ್ಟರ್‌ಜಿಯವರು ಅವರನ್ನು ಸಮಾಧಾನ ಪಡಿಸುತ್ತ “ಅದಕ್ಕಾಗಿ ಇಷ್ಟೊಂದು ಕೋಪವೇಕೆ? ಉಪ್ಪಿಲ್ಲವೆಂದ ಮಾತ್ರಕ್ಕೆ ಊಟವನ್ನೇ ಬಿಡುತ್ತೇವೇನು? ಗೊತ್ತಿರಲಿ, ಕೆಲವರು ಊಟಕ್ಕಾಗಿಯೇ ಬದುಕುತ್ತಾರೆ, ಇನ್ನು ಕೆಲವರು ಬದುಕಲಿಕ್ಕಾಗಿ ಊಟ ಮಾಡುತ್ತಾರೆ. ನಾವೂ ಅಷ್ಟೇ, ಬದುಕಲಿಕ್ಕಾಗಿ ಊಟ ಮಾಡುವವರು” ಎಂದು ಅವರಿಗೆ ತಿಳಿಹೇಳಿದರು.

## ಪುಸ್ತಕ ಪರಿಚಯ

### ‘ನೌಕಾ ಬಂಡಾಯ 1946 – ಸಾಗರದಲ್ಲಿ ಅಗ್ನಿಶಿಖೆ’

**ಲೇಖಕರು:** ಬಿ.ಪಿ. ಪ್ರೇಮಕುಮಾರ್
**ಪ್ರಕಾಶನ:** ರಾಷ್ಟ್ರೋತ್ಥಾನ ಸಾಹಿತ್ಯ
**ಬೆಲೆ:** ರೂ.350




ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯ ಆಧಾರವನ್ನೇ ಅಲುಗಾಡಿಸಿದ ನೌಕಾ ಬಂಡಾಯವನ್ನು ಕುರಿತ ಪೂರ್ಣಪ್ರಮಾಣದ ಸಮಗ್ರಗ್ರಂಥ ಇದುವರೆಗೆ ಭಾರತದ ಯಾವುದೇ ಭಾಷೆಗಳಲ್ಲಿ ಬಂದಿಲ್ಲ. ಮದರಾಸು–ಕೊಚ್ಚಿಯಿಂದ ಕರಾಚಿವರೆಗೆ, ಮುಂಬಯಿಯಿಂದ ಕೋಲ್ಕತಾ ವಿಶಾಖಪಟ್ಟಣಗಳವರೆಗೆ ಕಾಳ್ಗಿಚ್ಚಿನಂತೆ ಹರಡಿದ ನೌಕಾಸೈನಿಕ ಬಂಡಾಯ ಭಾರತದ ಮೇಲೆ ಇಂಗ್ಲೆಂಡ್ 150 ವರ್ಷಗಳಿಂದ ನಡೆಸಿದ್ದ ಅಧಿಪತ್ಯದ ಅವಸಾನವನ್ನು ಹತ್ತಿರವಾಗಿಸಿದ ಪ್ರಮುಖ ಘಟನೆ. ನೌಕಾಸೈನಿಕರು ತಮ್ಮ ಸರ್ವಸ್ವವನ್ನು ಒತ್ತೆಯಿಟ್ಟು ಪ್ರಭುತ್ವದ ವಿರುದ್ಧ ಮೆರೆದ ಶೌರ್ಯವಂತಿಕೆ, ಆಗಿನ ನಾಯಕರು ಪ್ರದರ್ಶಿಸಿದ ಸತ್ತ್ವಹೀನತೆ, ನೌಕಾಸೈನಿಕರ ಅಸೀಮ ತ್ಯಾಗದ ಬಗೆಗೆ ಸ್ವಾತಂತ್ರ್ಯೋತ್ತರ ದೇಶೀಯ ಸರ್ಕಾರವೇ ತೋರಿದ ದುರ್ಲಕ್ಷ್ಯ – ಇವುಗಳ ಸತ್ಯದರ್ಶನ ಈಗಿನವರಿಗೆ ಆಗಬೇಕಾಗಿದೆ. ಆ ಜ್ವಲಂತ ಪರ್ವದ ಬಗೆಗೆ ವಿರಳ ಮೂಲ ಆಕರಗಳ ಆಧಾರದಿಂದ ರಚಿಸಲಾಗಿರುವ ಶೋಧಗ್ರಂಥ ‘ನೌಕಾ ಬಂಡಾಯ 1946 – ಸಾಗರದಲ್ಲಿ ಅಗ್ನಿಶಿಖೆ’.

ವೆಬ್‌ಸೈಟ್: https://www.sahityabooks.com

ಸಂಪಾದಕೀಯ ಸಹಕಾರ: ಆರತಿ ಪಟ್ರಮೆ, ಗಿರಿಧರ್ ಉದ್ಯಾವರ, ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ತನ್ಮಯೀ ಪ್ರೇಮಕುಮಾರ್, ವಿನಯ್ ಕೃಷ್ಣ ಹೆಚ್.ವಿ.

## ಮಾಜಿ ಸೈನಿಕರ ಕಲ್ಯಾಣ ಯೋಜನೆಗಳ ಮೊತ್ತ ಹೆಚ್ಚಳ

ಮಾಜಿ ಸೈನಿಕರ ಕಲ್ಯಾಣ ಮತ್ತು ಸುಲಭ ಜೀವನ ನೀತಿಯ ಅನುಸಾರವಾಗಿ ಮಾಜಿ ಸೈನಿಕರ ವಿವಿಧ ಕಲ್ಯಾಣ ಯೋಜನೆಗಳ ಮೊತ್ತವನ್ನು ಹೆಚ್ಚಿಸಲಾಗಿದೆ ಎಂದು ರಕ್ಷಣ ಸಚಿವ ರಾಜನಾಥ್ ಸಿಂಗ್ ಟ್ವೀಟ್ ಮೂಲಕ ಮಾಹಿತಿ ನೀಡಿದ್ದಾರೆ. ಮಾಜಿ ಸೈನಿಕರ ಪತ್ನಿಯರಿಗೆ ವೃತ್ತಿ ತರಬೇತಿ ಅನುದಾನ ಯೋಜನೆಯಡಿ ಧನಸಹಾಯವನ್ನು 20,000ದಿಂದ 50,000ಕ್ಕೆ ಹೆಚ್ಚಿಸಲಾಗಿದೆ. ಪಿಂಚಣಿದಾರರಲ್ಲದ ಮಾಜಿ ಸೈನಿಕರು ಅಥವಾ ಅವರ ವಿಧವೆಯರು ಹೆಚ್ಚಿದ ವೈದ್ಯಕೀಯ ಅನುದಾನ ಪಡೆಯಲಿದ್ದಾರೆ. ಅದರ ಮೊತ್ತವನ್ನು 30,000ದಿಂದ 50,000 ರೂಪಾಯಿಗಳಿಗೆ ಹೆಚ್ಚಿಸಲಾಗಿದೆ. ಪಿಂಚಣಿದಾರರಲ್ಲದ ಮಾಜಿ ಸೈನಿಕರು ಅಥವಾ ಅವರ ವಿಧವೆಯರಿಗೆ ಗಂಭೀರ ರೋಗಗಳ ಅನುದಾನವನ್ನು 1,25,000 ದಿಂದ 1,50,000ಕ್ಕೆ ಹೆಚ್ಚಿಸಲಾಗಿದೆ.

## ವಿಶ್ವ ದರ್ಜೆಯ ವಸ್ತುಸಂಗ್ರಹಾಲಯಕ್ಕೆ ಶಂಕುಸ್ಥಾಪನೆ

ತಮಿಳುನಾಡಿನ ತೂತುಕುಡಿ ಜಿಲ್ಲೆಯ ಶ್ರೀವೈಕುಂಡಂ ಬಳಿಯ



ಆದಿಚನಲ್ಲೂರಿನಲ್ಲಿ ವಿಶ್ವ ದರ್ಜೆಯ ವಸ್ತುಸಂಗ್ರಹಾಲಯಕ್ಕೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಶಂಕುಸ್ಥಾಪನೆ ಮಾಡಿದರು. ಅಲ್ಲದೇ ತಮ್ಮ ಭೇಟಿಯ ವೇಳೆ 2021ರಿಂದ ಉತ್ಖನನ ಕಾರ್ಯ ನಡೆಯುತ್ತಿರುವ ಆದಿಚನಲ್ಲೂರು ಪರಂಬು ಪ್ರದೇಶವನ್ನು ಪರಿಶೀಲಿಸಿದರು. ಪುರಾತತ್ವ ಸರ್ವೇಕ್ಷಣಾ ಸಂಸ್ಥೆ (ASI) ಪುರಾತನ ವಸ್ತುಗಳ ಐಕಾನಿಕ್ ಆನ್–ಸೈಟ್ ವಸ್ತುಸಂಗ್ರಹಾಲಯವನ್ನು ಅಭಿವೃದ್ಧಿಪಡಿಸಿದೆ.

## 8 ಪಾರಂಪರಿಕ ಮಾರ್ಗಗಳಲ್ಲಿ 35 ಹೈಡ್ರೋಜನ್ ಚಾಲಿತ ರೈಲು

ಪರಿಸರ ಸ್ನೇಹಿ ಕ್ರಮವನ್ನು ಸಾಧಿಸಲು, ರೈಲ್ವೆಯು ಪ್ರವಾಸೋದ್ಯಮಕ್ಕೆ ಸಂಭಾವ್ಯತೆಯನ್ನು ಹೊಂದಿರುವ ಪರಿಸರ ಸೂಕ್ಷ್ಮ ಗುಡ್ಡಗಾಡು ಪ್ರದೇಶಗಳಲ್ಲಿ ರೈಲ್ವೆ ಮಾರ್ಗಗಳಲ್ಲಿ ಹೈಡ್ರೋಜನ್

# ಸಾಲುದ್ದದ ಸುದ್ದಿಗಳು


ರೈಲುಗಳನ್ನು ಸಂಚರಿಸಲು ಮತ್ತು ನಿರ್ವಹಿಸಲು ಯೋಜಿಸಿದೆ. 17ನೇ ಲೋಕಸಭೆಯ ರೈಲ್ವೇ ಸ್ಥಾಯಿ ಸಮಿತಿ (2022–23) ತನ್ನ ವರದಿಯಲ್ಲಿ ಪ್ರತಿ ರೈಲಿಗೆ 80 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ 35 ಹೈಡ್ರೋಜನ್ ರೈಲುಗಳನ್ನು ಓಡಿಸಲು ರೈಲ್ವೆಯು ಪ್ರಸ್ತಾಪಿಸಿದೆ ಮತ್ತು ತಳ ಮಟ್ಟದ ಮೂಲಸೌಕರ್ಯಕ್ಕೆ 70 ಕೋಟಿ ರೂ ಅಂದಾಜಿಸಿದೆ.

## ರಾಜ್ಯಸಭಾ ಸದಸ್ಯರಿಗೆ ವೇದಗಳ ಪ್ರತಿ

ರಾಜ್ಯಸಭೆಯ ಎಲ್ಲಾ ಸಂಸದರಿಗೆ ಅಧ್ಯಯನ ಮಾಡಲು ಸರ್ಕಾರವು ವೇದಗಳನ್ನು ಶೀಘ್ರದಲ್ಲೇ ಉಡುಗೊರೆಯಾಗಿ ನೀಡಲಿದೆ. ಸಭಾಪತಿ ಜಗದೀಪ್ ಧನಕರ್ ಅವರ ಮನವಿಯ ನಂತರ ಪ್ರಶ್ನೋತ್ತರ ಅವಧಿಯಲ್ಲಿ ಸಂಸತ್ತಿನ ಮೇಲ್ಮನೆಯ ಮಹಡಿಯಲ್ಲಿ ಈ ಭರವಸೆ ನೀಡಲಾಯಿತು. ರಾಜ್ಯಸಭಾ ಸದಸ್ಯರಿಗೆ ಎಲ್ಲಾ ಭಾಷೆಯ ವೇದಗಳ ನಕಲು ಪ್ರತಿ ನೀಡಲಾಗುವುದು ಎಂದು ಧನಕರ್ ಹೇಳಿದ್ದಾರೆ.

## ಭಾರತೀಯ ನೌಕಾಪಡೆಯ ಸ್ಟೆಲ್ತ್‌ಶಿಪ್ ವಿಂಧ್ಯಗಿರಿ ಲೋಕಾರ್ಪಣೆಗೊಳಿಸಿದ ರಾಷ್ಟ್ರಪತಿ

ಭಾರತೀಯ ನೌಕಾಪಡೆಯ ಸ್ಟೆಲ್ತ್ ಶಿಪ್ ವಿಂಧ್ಯಗಿರಿ ಪ್ರಾಜೆಕ್ಟ್ 17 ಆಲ್ಫಾ ಫ್ರಿಗೇಟ್ಸ್‌ನ ಆರನೇ ಹಡಗನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಅನಾವರಣ ಮಾಡಿದರು. ಕೋಲ್ಕತ್ತಾದ ಗಾರ್ಡನ್ ರೀಚ್ ಶಿಪ್ ಬಿಲ್ಡರ್ಸ್ ಮತ್ತು ಇಂಜಿನಿಯರ್ಸ್ ಲಿಮಿಟೆಡ್‌ನಲ್ಲಿ ನೂತನ ವಿಂಧ್ಯಗಿರಿಯನ್ನು ಅನಾವರಣಗೊಳಿಸಲಾಯಿತು. ಐಎನ್ಎಸ್ ನೀಲಗಿರಿ, ಉದಯಗಿರಿ, ಹಿಮಗಿರಿ, ತಾರಗಿರಿ ಮತ್ತು ದುನಗಿರಿಗಳು ಪರ್ವತದ ಹೆಸರು ಹೊಂದಿರುವಂತೆ ವಿಂಧ್ಯಗಿರಿಗೆ ಕರ್ನಾಟಕದ




ಪರ್ವತ ಶ್ರೇಣಿಯ ಹೆಸರನ್ನು ಇಡಲಾಗಿದೆ. ಇದು ತಾಂತ್ರಿಕವಾಗಿ ಮುಂದುವರಿದ ನೌಕೆಯಾಗಿದ್ದು, ಹಿಂದಿನ ಲಿಯಾಂಡರ್ ಕ್ಲಾಸ್ ಎಎಸ್‌ಡಬ್ಲ್ಯೂ ಫ್ರಿಗೇಟ್‌ನ ಐಎನ್ಎಸ್ ವಿಂಧ್ಯಗಿರಿಯ ವಿಶಿಷ್ಟ ಸೇವೆಗೆ ಯೋಗ್ಯವಾದ ಗೌರವವನ್ನು ಸಲ್ಲಿಸುತ್ತದೆ.

## 3 ವರ್ಷದಲ್ಲಿ 4 ಕೋಟಿ ಸಸಿಗಳನ್ನು ನೆಟ್ಟ ಕೇಂದ್ರ ಸಶಸ್ತ್ರ ಪಡೆ




ಹವಾಮಾನ ಬದಲಾವಣೆ ಮತ್ತು ಜಾಗತಿಕ ತಾಪಮಾನದ ವಿರುದ್ಧದ ಹೋರಾಟದಲ್ಲಿ ಭಾರತವು ಗಣನೀಯ ಸಾಧನೆ ಮಾಡುತ್ತಿದೆ. 2020ರ ಜುಲೈ 12ರಂದು ಕೇಂದ್ರ ಗೃಹಮಂತ್ರಿ ಅಮಿತ್ ಷಾ ಅವರು ದೇಶದಾದ್ಯಂತ ಪ್ಲಾಂಟೇಶನ್ ಡ್ರೈವ್ ಅನ್ನು ಪ್ರಾರಂಭಿಸಿದರು. ಇದರ ಭಾಗವಾಗಿ ಅಂಕಿಅಂಶಗಳು 2020 ರಿಂದ 2022ರ ಮೂರು ವರ್ಷಗಳ ಅವಧಿಯಲ್ಲಿ ರಾಷ್ಟ್ರಾದ್ಯಂತ 4 ಕೋಟಿ ಸಸಿಗಳನ್ನು ನೆಟ್ಟಿವೆ. ಈ ವರ್ಷ ಎಲ್ಲಾ ಕೇಂದ್ರೀಯ ಮೀಸಲು ಪೊಲೀಸ್ ಪಡೆಗಳಿಂದ 1.5 ಕೋಟಿ ಸಸಿಗಳನ್ನು ನೆಡುವ ಸಾಮೂಹಿಕ ಗುರಿಯನ್ನು ತಲುಪಿವೆ. ಒಟ್ಟು ಸಸಿ ನೆಡುವಿಕೆಯನ್ನು ಐದು ಕೋಟಿಗೆ ಕೊಂಡೊಯ್ಯುವುದು ರಾಷ್ಟ್ರದ ಒಟ್ಟಾರೆ ಪರಿಸರ ಸಂರಕ್ಷಣಾ ಪ್ರಯತ್ನಗಳಿಗೆ CAPFಗಳ ಕೊಡುಗೆಯಾಗಿದೆ.

# ನಿರ್ಮಲ ಸಮಾಜ ನಿರ್ಮಾಣಕ್ಕಾಗಿ ಶ್ರಮಿಸಿದ ಬಿಂದೇಶ್ವರ ಪಾಠಕ್

ಪ್ರೇರಣಾ

ಭಾರತದ ಸಾಮಾಜಿಕ ಪರಿವರ್ತನೆಗಾಗಿ, ದಣಿವರಿಯದ ಪ್ರಯತ್ನಗಳು, ಜಾತಿ, ವರ್ಗ ಮತ್ತು ಸಂಪ್ರದಾಯದ ಅಡೆತಡೆಗಳನ್ನು ಮೀರಿ ಲಕ್ಷಾಂತರ ಜನರ ಜೀವನವನ್ನು ಪರಿವರ್ತಿಸಿದ ಮಹಾನ್ ವ್ಯಕ್ತಿಯಾಗಿ ಸಮಾಜ ಸುಧಾರಕ ಬಿಂದೇಶ್ವರ್ ಪಾಠಕ್ ನಿಂತಿದ್ದಾರೆ. ತಮ್ಮ ಜೀವನವನ್ನು ನೈರ್ಮಲ್ಯ, ಮಾನವ ಘನತೆ ಮತ್ತು ಸಾಮಾಜಿಕ ಸಮಾನತೆಗಳಿಗಾಗಿ ಮುಡಿಪಾಗಿಟ್ಟವರು. ಒಂದು ಸಣ್ಣ ಹಳ್ಳಿಯಿಂದ ಜಾಗತಿಕ ವೇದಿಕೆಗೆ ಅವರ ಗಮನಾರ್ಹ ಪ್ರಯಾಣವು ಅಚಲ ಬದ್ಧತೆಯ ಶಕ್ತಿಗೆ ಸಾಕ್ಷಿಯಾಗಿದೆ.

ಏಪ್ರಿಲ್ 2, 1943ರಲ್ಲಿ ಬಿಹಾರದ ರಾಂಪುರದ ಸಾಧಾರಣ ಕುಟುಂಬದಲ್ಲಿ ಜನಿಸಿದ ಬಿಂದೇಶ್ವರ್ ಪಾಠಕ್ ಅವರು ಚಿಕ್ಕ ವಯಸ್ಸಿನಿಂದಲೇ ಸಾಮಾಜಿಕ ಅಸಮಾನತೆಯ ಕಟುವಾದ ಸತ್ಯಗಳಿಗೆ ತೆರೆದುಕೊಂಡರು. 'ಕೆಳಜಾತಿಗಳು' ಎಂದು ಕರೆಯಲ್ಪಡುವ ವ್ಯಕ್ತಿಗಳು ಮಲವನ್ನು ಸ್ವಚ್ಛಗೊಳಿಸಲು ವ್ಯಾಪಕವಾಗಿದ್ದ ಮಾನವ ಮಲಗುಂಡಿ ಸ್ವಚ್ಛತೆಯ ಅಭ್ಯಾಸವು ಅವರ ಯುವ ಮನಸ್ಸಿನ ಮೇಲೆ ಆಳವಾಗಿ ಬೇರೂರಿರುವ ಅನ್ಯಾಯದ ಕುರಿತು ಪ್ರಭಾವಬೀರಿತು ಮತ್ತು ಅವರ ಜೀವನದ ಧ್ಯೇಯವನ್ನು ಹೊತ್ತಿಸುವ ಕಿಡಿಯನ್ನು ಬೆಳಗಿಸಿತು.

ಪಾಠಕ್ ಅವರ ಪರಿವರ್ತನೆಯ ಹಾದಿಯು ಸಹಾನುಭೂತಿ ಮತ್ತು ನಾವೀನ್ಯತೆಯಿಂದ ಸುಗಮವಾಯಿತು. ಸಮಾಜಶಾಸ್ತ್ರದಲ್ಲಿ ಪದವಿ ಪಡೆದ ಅವರು ಮಾನವ ಮಲಗುಂಡಿ ಸ್ವಚ್ಛತೆಯ ಅಭ್ಯಾಸವನ್ನು ತೊಡೆದುಹಾಕಲು ಮತ್ತು ಸಮಾಜದ ಅಂಚಿನಲ್ಲಿರುವವರನ್ನು ಮೇಲಕ್ಕೆತ್ತಲು ಒಂದು ಕಾರ್ಯಾಚರಣೆಯನ್ನು ಪ್ರಾರಂಭಿಸಿದರು. ಎರಡು ಪಿಟ್ ಸುರಿಯುವ–ಫ್ಲಶ್ ಶೌಚಾಲಯದ ಅವರ ಅದ್ಭುತ ಕಲ್ಪನೆಯು ಮಾನವ ಮಲಗುಂಡಿ ಸ್ವಚ್ಛತೆ ಅಗತ್ಯವನ್ನು ನಿವಾರಿಸಿ ಸುರಕ್ಷಿತ ತ್ಯಾಜ್ಯ ವಿಲೇವಾರಿ ಮತ್ತು ಜೈವಿಕ ಅನಿಲ ಉತ್ಪಾದನೆಯನ್ನು ಉತ್ತೇಜಿಸಿತು.

1970ರಲ್ಲಿ, ಅವರು ಸುಲಭ್ ನೈರ್ಮಲ್ಯ ಆಂದೋಲನವನ್ನು ಪ್ರಾರಂಭಿಸಿದರು – ಎಲ್ಲರಿಗೂ ಪ್ರವೇಶಿಸಬಹುದಾದ ಸ್ವಚ್ಛ ಮತ್ತು ಆರೋಗ್ಯಕರ ನೈರ್ಮಲ್ಯ ಸೌಲಭ್ಯಗಳನ್ನು ರಚಿಸುವ ಕ್ರಾಂತಿಕಾರಿ ಹೆಜ್ಜೆ ಅದಾಗಿತ್ತು. ಅವರ ಅವಿರತ ಪ್ರಯತ್ನಗಳ ಮೂಲಕ, ಭಾರತದಾದ್ಯಂತ ಸಾವಿರಾರು ಶೌಚಾಲಯಗಳನ್ನು ನಿರ್ಮಿಸಲಾಯಿತು. ಅಸಂಖ್ಯಾತ ಕುಟುಂಬಗಳ ಜೀವನವನ್ನು ಪರಿವರ್ತಿಸಲಾಯಿತು. ಆಂದೋಲನದ ಪ್ರಭಾವವು ನೈರ್ಮಲ್ಯವನ್ನು ಮೀರಿ ವಿಸ್ತರಿಸಿತು. ಸಮಾಜದ ಅಂಚಿನಲ್ಲಿರುವ ವರ್ಗಗಳಲ್ಲಿ ಘನತೆ ಮತ್ತು ಸಬಲೀಕರಣದ ಪ್ರಜ್ಞೆಯನ್ನು ಬೆಳೆಸಿತು.

2021ರ ಹೊತ್ತಿಗೆ ಸುಲಭ್ ಇಂಟರ್ನ್ಯಾಷನಲ್ ಸೋಶಿಯಲ್ ಸರ್ವಿಸ್ ಸಂಸ್ಥೆ, ಅವರ ನಾಯಕತ್ವದಲ್ಲಿ, ಭಾರತದಲ್ಲಿ 15 ಲಕ್ಷ ಮನೆಗಳಲ್ಲಿ ಶೌಚಾಲಯಗಳನ್ನು ಯಶಸ್ವಿಯಾಗಿ ನಿರ್ಮಿಸಿತು. ಈ ಸೌಲಭ್ಯಗಳು ನೈರ್ಮಲ್ಯವನ್ನು ಸುಧಾರಿಸುವುದು ಮಾತ್ರವಲ್ಲದೆ ಸಾಮಾಜಿಕ ಮತ್ತು ಆರ್ಥಿಕ ರೂಪಾಂತರದ ವಿಷಯದಲ್ಲಿ ಉತ್ತಮ ಪರಿಣಾಮವನ್ನು ಸೃಷ್ಟಿಸಿತು.

ಪಾಠಕ್ ಅವರ ಉಪಕ್ರಮಗಳ ಅತ್ಯಂತ ಗಮನಾರ್ಹ ಅಂಶವೆಂದರೆ ಅವರು ಸೃಷ್ಟಿಸಿದ ಉದ್ಯೋಗಾವಕಾಶಗಳು. ಸುಲಭ್ ಆಂದೋಲನವು ಈ ಹಿಂದೆ ಮಲಗುಂಡಿ ಸ್ವಚ್ಛಗೊಳಿಸುವವರು ಸೇರಿದಂತೆ ಅಂಚಿನಲ್ಲಿರುವ ಸಮುದಾಯಗಳಿಂದ 50,000ಕ್ಕೂ ಹೆಚ್ಚು ಜನರಿಗೆ ಉದ್ಯೋಗಾವಕಾಶವನ್ನು ಕೊಟ್ಟು ನೇಮಿಸಿಕೊಂಡಿದೆ. ಈ ವ್ಯಕ್ತಿಗಳಿಗೆ ಸಾಮಾಜಿಕ ತಾರತಮ್ಯದ ಚಕ್ರದಿಂದ ಹೊರಬರಲು, ಹೊಸ ಘನತೆ ಮತ್ತು ಸ್ವಾವಲಂಬನೆಯನ್ನು ಸ್ವೀಕರಿಸಲು ಅವಕಾಶವನ್ನು ನೀಡಲಾಯಿತು.

ಪಾಠಕ್ ಅವರ ದೃಷ್ಟಿ ಭಾರತದ ಗಡಿಯನ್ನು ಮೀರಿ ವಿಸ್ತರಿಸಿತು. ಸುಲಭ್ ಇಂಟರ್ನ್ಯಾಷನಲ್ ಸೋಶಿಯಲ್ ಸರ್ವಿಸ್ ಸಂಸ್ಥೆ ಜಾಗತಿಕ ಮಟ್ಟದಲ್ಲಿ ನೈರ್ಮಲ್ಯವನ್ನು ಪ್ರತಿಪಾದಿಸಿದೆ. ಸಂಸ್ಥೆಯ ಉಪಕ್ರಮಗಳು ಅಫ್ಘಾನಿಸ್ತಾನ, ಭೂತಾನ್ ಮತ್ತು ದಕ್ಷಿಣ ಆಫ್ರಿಕಾದಂತಹ ವಿವಿಧ ದೇಶಗಳನ್ನು ತಲುಪಿದೆ, ಸಮುದಾಯ ಶೌಚಾಲಯಗಳು, ತ್ಯಾಜ್ಯ



ನಿರ್ವಹಣಾ ವ್ಯವಸ್ಥೆಗಳು ಮತ್ತು ಜೈವಿಕ ಅನಿಲ ಘಟಕಗಳನ್ನು ಉತ್ತೇಜಿಸುತ್ತದೆ. ಅವರ ಕೆಲಸವು 2009ರಲ್ಲಿ ಸ್ಟಾಕ್‌ಹೋಮ್ ವಾಟರ್ ಪ್ರಶಸ್ತಿಯನ್ನು ಒಳಗೊಂಡಂತೆ ಅಂತರರಾಷ್ಟ್ರೀಯ ಮೆಚ್ಚುಗೆಯನ್ನು ಗಳಿಸಿದೆ. ಇದನ್ನು ಸಾಮಾನ್ಯವಾಗಿ ನೀರಿನ ನೊಬೆಲ್ ಪ್ರಶಸ್ತಿ ಎಂದು ಕರೆಯಲಾಗುತ್ತದೆ. ಪಾಠಕ್ ಅವರ ಪುರಸ್ಕಾರಗಳು ತಮಗಿಂತ ದೊಡ್ಡ ಉದ್ದೇಶಕ್ಕಾಗಿ ವ್ಯಕ್ತಿಯ ಸಮರ್ಪಣೆಯ ಭಾವದ ಪ್ರತೀಕವಾಗಿದೆ.

ಬಿಂದೇಶ್ವರ ಪಾಠಕ್ ಅವರ ಜೀವನ ಕಥೆಯು ಸಹಾನುಭೂತಿ, ನಾವೀನ್ಯತೆಯ ಶಕ್ತಿಗೆ ಸಾಕ್ಷಿಯಾಗಿದೆ ಹಾಗೂ ಬದಲಾವಣೆಯು ಕೇವಲ ಸಾಧ್ಯ ಮಾತ್ರವಲ್ಲ ಆದರೆ ಅನಿವಾರ್ಯವಾಗಿದೆ ಎಂಬುದನ್ನು ದೃಢೀಕರಿಸುತ್ತದೆ. ಪಾಠಕ್ ಅವರ ಕೆಲಸವು ಕೇವಲ ಭೌತಿಕ ಸ್ಥಳಗಳನ್ನು ಮಾತ್ರವಲ್ಲದೆ ಮನಸ್ಥಿತಿಗಳನ್ನೂ ಮಾರ್ಪಡಿಸಿದೆ. ದೃಢವಾದ ಕ್ರಿಯೆಯ ಮೂಲಕ ಸ್ವಚ್ಛ ಮತ್ತು ಸಮಾನ ಸಮಾಜವನ್ನು ಸಾಧಿಸಬಹುದು ಎಂದು ತೋರಿಸುತ್ತದೆ. – **ಮೂಲ: ದಿ ಬೆಟರ್ ಇಂಡಿಯಾ**

**ಆಗಸ್ಟ್ 15, 2023ರಂದು ಬಿಂದೇಶ್ವರ ಪಾಠಕ್ ನಿಧನರಾದರು. ಅವರ ನಿಧನಕ್ಕೆ ಆರ್‌ಎಸ್‌ಎಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರು ಸಂತಾಪ ವ್ಯಕ್ತಪಡಿಸಿದ್ದಾರೆ.**

पुंगव PUNGAVA
# 74, Ranga Rao Road, Shankarapuram, Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 25th AUGUST 2023
REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2021-2023 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23
FORTNIGHTLY 01-09-2023






## ಜಗತ್ತಿಗಿದೆ ಭಾರತದ ಅಗತ್ಯ: ಡಾ.ಮೋಹನ್ ಭಾಗವತ್

**ಬೆಂಗಳೂರು:** "ಇಡೀ ವಿಶ್ವಕ್ಕೆ ಬೆಳಕು ನೀಡುವುದಕ್ಕಾಗಿಯೇ ಭಾರತ ಸ್ವತಂತ್ರವಾಗಿದೆ. ಇಂದು ಜಗತ್ತಿಗೆ ಭಾರತದ ಅವಶ್ಯಕತೆ ಇದೆ. ಹಾಗಾಗಿ ದೇಶವನ್ನು ಮತ್ತಷ್ಟು ಸದೃಢಗೊಳಿಸಬೇಕಿದೆ" ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ.ಮೋಹನ್ ಭಾಗವತ್ ಹೇಳಿದರು.

ಬೆಂಗಳೂರಿನ ಬಸವನಗುಡಿಯಲ್ಲಿ ಸಮರ್ಥ ಭಾರತ ಸಂಸ್ಥೆ ಆಯೋಜಿಸಿದ್ದ 77ನೇ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, "ನಾವು ಮೊದಲು ಸಬಲರಾಗದಿದ್ದರೆ, ನಮ್ಮನ್ನು ಒಡೆಯುವ ಶಕ್ತಿಗಳು ಬಲಿಷ್ಠಗೊಳ್ಳುತ್ತವೆ" ಎಂದರು.

"ರಾಷ್ಟ್ರ ಧ್ವಜದಲ್ಲಿರುವ ಕೇಸರಿ ಬಣ್ಣವು ನಿರಂತರವಾಗಿ ಕ್ರಿಯಾಶೀಲರಾಗಿರುವಂತೆ ಮಾಡುತ್ತದೆ. ಬಿಳಿಯ ಬಣ್ಣವು ತ್ಯಾಗ ಮಾಡುವುದಕ್ಕಾಗಿ, ಸ್ವಾರ್ಥಕ್ಕಾಗಿ ಅಲ್ಲ ಎಂಬುದನ್ನು ಸೂಚಿಸುತ್ತದೆ. ಅದು ಪ್ರತಿಯೊಬ್ಬರ ಮನದ ವಿಕಾರಗಳನ್ನು ನಿರ್ಮೂಲನೆಗೊಳಿಸುತ್ತದೆ ಹಾಗೂ ಹಸಿರು ಬಣ್ಣವು ಸಮೃದ್ಧಿಯ ಸಂಕೇತವಾಗಿದೆ" ಎಂದರು.

"ನಮ್ಮ ಆಸ್ಮಿತೆಯ ಆಧಾರದಲ್ಲಿ ನಾವು ಸದೃಢ ದೇಶವನ್ನು ಕಟ್ಟಬೇಕು. ಜ್ಞಾನ, ಭಕ್ತಿ, ಕರ್ಮದ ಆಧಾರದ ಮೇಲೆ ಉತ್ತಮ ಕೆಲಸ ಮಾಡಿದಲ್ಲಿ ಸ್ವಾತಂತ್ರ್ಯ ಖಂಡಿತವಾಗಿಯೂ ದೊರೆಯುವುದರಲ್ಲಿ ಸಂಶಯವಿಲ್ಲ" ಎಂದು ಅಭಿಪ್ರಾಯಪಟ್ಟರು

## ಸೈದ್ಧಾಂತಿಕ ಬೇಧದ ಕಾರಣ ವೈಯಕ್ತಿಕ ದ್ವೇಷ ಸರಿಯಲ್ಲ: ದತ್ತಾತ್ರೇಯ ಹೊಸಬಾಳೆ



**ನಾಗ್ಪುರ:** "ಸೈದ್ಧಾಂತಿಕ ವಿರೋಧ ಮತ್ತು ಭಿನ್ನಾಭಿಪ್ರಾಯಗಳೇನೇ ಇದ್ದರೂ, ಸಮಾಜದಲ್ಲಿ ವೈಯಕ್ತಿಕ ದ್ವೇಷ ಎಂಬುದು ಇರಬಾರದು" ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅಭಿಪ್ರಾಯಪಟ್ಟಿದ್ದಾರೆ.

ಆರ್‌ಎಸ್‌ಎಸ್ ಹಿರಿಯ ಕಾರ್ಯಕರ್ತ, ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಸಂಸ್ಥಾಪಕ ದತ್ತಾಜಿ ದಿಡೋಲ್ಕರ್ ಅವರ ಜನ್ಮಶತಮಾನೋತ್ಸವ ಕಾರ್ಯಕ್ರಮ ಉದ್ಘಾಟನೆ ವೇಳೆ ಅವರು ಮಾತನಾಡಿದರು.

"ದಿಡೋಲ್ಕರ್ ತಾವು ನಂಬಿದ್ದ ಸಿದ್ಧಾಂತದೊಂದಿಗೆ ರಾಜಿಯಾಗದೇ, ಇತರರ ಅಭಿಪ್ರಾಯಗಳನ್ನು ಗೌರವಿಸುತ್ತಿದ್ದರು. ಅವರೊಂದಿಗೆ ಸ್ನೇಹಪೂರ್ವಕ ಸಂಬಂಧ ಹೊಂದಿದ್ದರು. ಭಾರತೀಯ ಮಜ್ದೂರ್ ಸಂಘದ ಸಂಸ್ಥಾಪಕ ದತ್ತೋಪಂಥ ಠೇಂಗ್ಡಿ ಕಾರ್ಮಿಕರ ಹಕ್ಕುಗಳಿಗೆ ಹೋರಾಡುತ್ತಿದ್ದಾಗ ಕಮ್ಯುನಿಸ್ಟ್ ನಾಯಕರೊಂದಿಗೂ ಸೌಹಾರ್ದ ಸಂಬಂಧ ಹೊಂದಿದ್ದರು" ಎಂದು ಹೊಸಬಾಳೆ ಹೇಳಿದರು.

"ಸಿದ್ಧಾಂತಕ್ಕೆ ವಿರೋಧಗಳಿರಬಹುದು. ಸಮಾಜದಲ್ಲಿ ಯಾರೂ ವೈಯಕ್ತಿಕ ವಿರೋಧಗಳನ್ನು ಹೊಂದಿರಬಾರದು. ಒಂದು ಸಮಾಜವಾಗಿ ನಾವು ಜೀವಿಸುತ್ತಿರುವಾಗ ಪರಸ್ಪರರ ನಡುವೆ ವೈರತ್ವ ಇರಬಾರದು. ಮಾನವೀಯತೆ ಮತ್ತು ನ್ಯಾಯಪರತೆಯೊಂದಿಗೆ ಸರಳ ಜೀವನ ನಡೆಸಬೇಕು" ಎಂದು ಅವರು ಸಲಹೆ ನೀಡಿದರು.

## 30 ವರ್ಷಗಳ ಬಳಿಕ ಕಾಶ್ಮೀರ ಪಂಡಿತ ಕೊಲೆ ಪ್ರಕರಣದ ತನಿಖೆ ಮರು ಆರಂಭ

ಕಣಿವೆಯಲ್ಲಿ ಕಾಶ್ಮೀರಿ ಪಂಡಿತರಿಗೆ ಸಂಬಂಧಿಸಿದ ಹೊಸ ಬೆಳವಣಿಗೆ ನಡೆದಿದ್ದು, ಜಮ್ಮು ಮತ್ತು ಕಾಶ್ಮೀರ ರಾಜ್ಯ ತನಿಖಾ ಸಂಸ್ಥೆ, ನಿವೃತ್ತ ನ್ಯಾಯಾಧೀಶ ನೀಲಕಂಠ ಗಂಜೂ ಅವರ 33 ವರ್ಷಗಳ ಹಿಂದಿನ ಕೊಲೆ ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಿದೆ. 1989ರಲ್ಲಿ ಕಣಿವೆಯಲ್ಲಿ ನಡೆದ ಉದ್ದೇಶಿತ ದಾಳಿಯಲ್ಲಿ ಕಾಶ್ಮೀರಿ ಪಂಡಿತರಾಗಿದ್ದ ನಿವೃತ್ತ ನ್ಯಾಯಾಧೀಶ ನೀಲಕಂಠ ಗಂಜೂ ಅವರನ್ನು ಉಗ್ರರು ಗುಂಡಿಕ್ಕಿ ಕೊಂದಿದ್ದರು. ಜಮ್ಮು ಮತ್ತು ಕಾಶ್ಮೀರದ ರಾಜ್ಯ ತನಿಖಾ ಸಂಸ್ಥೆ (ಎಸ್ಐಎ) ಕಾಶ್ಮೀರಿ ಪಂಡಿತರನ್ನು ಗುರಿಯಾಗಿಸಿ ಹತ್ಯೆಗೈದಿರುವ ಹಿಂದೆ "ದೊಡ್ಡ ಕ್ರಿಮಿನಲ್ ಪಿತೂರಿ" ಯನ್ನು ಬಯಲಿಗೆಳೆಯಲು ಸಾರ್ವಜನಿಕರಿಂದ ಮಾಹಿತಿ ಮತ್ತು ವಿವರಗಳನ್ನು ಕೇಳಿದೆ. 1960ರ ದಶಕದಲ್ಲಿ ನ್ಯಾಯಾಧೀಶ ಗಂಜೂ ಅವರು ಜಮ್ಮು ಕಾಶ್ಮೀರ ಲಿಬರೇಶನ್ ಫ್ರಂಟ್ (ಜೆಕೆಎಲ್ಎಫ್) ಸಂಸ್ಥಾಪಕ ಮತ್ತು ಉಗ್ರಗಾಮಿ ಮೊಹಮ್ಮದ್ ಮಕ್ಬೂಲ್ ಭಟ್‌ಗೆ ಮರಣದಂಡನೆ ವಿಧಿಸಿದ್ದರು. 1989ರಲ್ಲಿ ಉಗ್ರಗಾಮಿಗಳ ಗುಂಡಿಗೆ ಗಂಜೂ ಕೊಲ್ಲಲ್ಪಟ್ಟರು ಮತ್ತು ಕಾಶ್ಮೀರದ ಕಣಿವೆಯಲ್ಲಿ ಕಾಶ್ಮೀರಿ ಪಂಡಿತರ ಮೇಲಿನ ಉದ್ದೇಶಿತ ದಾಳಿಯಲ್ಲಿ ಉಗ್ರಗಾಮಿಗಳಿಂದ ಕೊಲ್ಲಲ್ಪಟ್ಟ ಪ್ರಮುಖ ಕಾಶ್ಮೀರಿ ಪಂಡಿತರಲ್ಲಿ ಅವರು ಒಬ್ಬರು.

## ಪ್ರಧಾನಿಯಾಗಿ ಅಲ್ಲ ಹಿಂದೂ ಆಗಿ ಭಾಗವಹಿಸಿದ್ದೇನೆ: ರಿಷಿ ಸುನಕ್

ಭಾರತೀಯ ಸ್ವಾತಂತ್ರ್ಯ ದಿನದಂದು ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದಲ್ಲಿ ನಡೆದ ರಾಮ್‌ಕಥಾದಲ್ಲಿ ಭಾಗವಹಿಸಿದ ಯುಕೆ ಪ್ರಧಾನಿ ರಿಷಿ ಸುನಕ್ ಅವರು ಮಾತನಾಡಿ "ತಾನು ಇಲ್ಲಿ ಪ್ರಧಾನಿಯಾಗಿ ಅಲ್ಲ ಹಿಂದೂ ಆಗಿ ಭಾಗವಹಿಸಿದ್ದೇನೆ. ಭಾರತೀಯ ಸ್ವಾತಂತ್ರ್ಯ ದಿನದಂದು ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದಲ್ಲಿ ಮೊರಾರಿ ಬಾಪು ಅವರ ರಾಮ್ ಕಥಾಗಾಗಿ ಇಲ್ಲಿಗೆ ಬಂದಿರುವುದು ನಿಜವಾಗಿಯೂ ಸಂತೋಷವಾಗಿದೆ. ಹಿಂದೂ ನಂಬಿಕೆಯು ಜೀವನದ ಪ್ರತಿಯೊಂದು ಅಂಶದಲ್ಲೂ ಮಾರ್ಗದರ್ಶನ ನೀಡುತ್ತದೆ ಮತ್ತು ಬ್ರಿಟನ್ ಪ್ರಧಾನಿಯಾಗಿ ಅತ್ಯುತ್ತಮವಾದದ್ದನ್ನು ಮಾಡಲು ಧೈರ್ಯವನ್ನು ನೀಡುತ್ತದೆ" ಎಂದರು. ಭಾರತೀಯ ಮೂಲದ ಮೊದಲ ಪ್ರಧಾನಿಯಾಗಿರುವ ರಿಷಿ ಸುನಕ್ ಅವರು ಪಂಜಾಬ್ ಮೂಲದವರಾಗಿದ್ದಾರೆ.



## ಕ್ರಿಶ್ಚಿಯನ್ ಮನೆಗಳಿಲ್ಲದ ಹಳ್ಳಿಯಲ್ಲಿ ಚರ್ಚ್ ನಿರ್ಮಾಣಕ್ಕೆ ವಿರೋಧ

ಯಾವುದೇ ಕ್ರಿಶ್ಚಿಯನ್ ಮನೆಗಳಿಲ್ಲದ ಹಳ್ಳಿಯಲ್ಲಿ ಮಿಷನರಿಗಳು ಚರ್ಚ್ ನಿರ್ಮಾಣ ಮಾಡುತ್ತಿದ್ದಾರೆ ಎನ್ನಲಾದ ಘಟನೆ ಚಿಕ್ಕಮಗಳೂರು ಹಳ್ಳಿಯೊಂದರಲ್ಲಿ ಬೆಳಕಿಗೆ ಬಂದಿದೆ. ಮತಾಂತರದ ಉದ್ದೇಶ ಇಟ್ಟುಕೊಂಡೇ ಇದನ್ನು ನಿರ್ಮಾಣ ಮಾಡಲಾಗುತ್ತಿದೆ ಎಂದು ಗ್ರಾಮಸ್ಥರು ಸಂಶಯ ವ್ಯಕ್ತಪಡಿಸಿದ್ದಾರೆ. ಚರ್ಚ್ ನಿರ್ಮಾಣ ಈಗಾಗಲೇ ವಿವಾದವನ್ನು ಹುಟ್ಟುಹಾಕಿದೆ. ಹಿಂದೂ ಸಂಘಟನೆಗಳು ಮತ್ತು ಗ್ರಾಮಸ್ಥರು ಕ್ರಿಶ್ಚಿಯನ್ ಮನೆಗಳಿಲ್ಲದ ಗ್ರಾಮದಲ್ಲಿ ಚರ್ಚ್ ನಿರ್ಮಾಣವನ್ನು ವಿರೋಧಿಸಿದ್ದಾರೆ. ಮೊದಲು ಮನೆ ನಿರ್ಮಾಣಕ್ಕೆ ಅನುಮತಿ ತೆಗೆದುಕೊಂಡು ಬಳಿಕ ಚರ್ಚ್ ನಿರ್ಮಾಣ ಮಾಡುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

## ಲುಂಬಿನಿಯಲ್ಲಿ ಭಾರತೀಯ ಬೌದ್ಧ ಸಂಸ್ಕೃತಿ ಮತ್ತು ಪರಂಪರೆ ಕೇಂದ್ರದ ನಿರ್ಮಾಣ ಕಾರ್ಯ ಆರಂಭ

ನೇಪಾಳದ ಲುಂಬಿನಿಯಲ್ಲಿ ಭಾರತೀಯ ಬೌದ್ಧ ಸಂಸ್ಕೃತಿ ಮತ್ತು ಪರಂಪರೆ ಕೇಂದ್ರದ ನಿರ್ಮಾಣ ಕಾರ್ಯ ಪ್ರಾರಂಭಗೊಂಡಿದೆ. 1.60 ಶತಕೋಟಿ ರೂಪಾಯಿ ವೆಚ್ಚದ ಹೆರಿಟೇಜ್ ಸೆಂಟರ್ ಕಮಲದ ಆಕಾರವನ್ನು ಹೊಂದಿದ್ದು, ಶೂನ್ಯ-ನೆಟ್ ತಂತ್ರಜ್ಞಾನದಲ್ಲಿ ನಿರ್ಮಿಸಲಾಗುವುದು ಮತ್ತು ಒಂದೂವರೆ ವರ್ಷಗಳಲ್ಲಿ ಪೂರ್ಣಗೊಳ್ಳಬಹುದು ಎಂದು ಹೇಳಲಾಗಿದೆ. ಪ್ರಧಾನಿ ನರೇಂದ್ರ ಮೋದಿ ಮತ್ತು ನೇಪಾಳದ ಅಂದಿನ ಪ್ರಧಾನಿ ಶೇರ್ ಬಹದ್ದೂರ್ ದೇವುಬಾ ಅವರು 2022 ರಲ್ಲಿ ಮೋದಿಯವರ ಲುಂಬಿನಿ ಭೇಟಿಯ ಸಂದರ್ಭದಲ್ಲಿ ಈ ಯೋಜನೆಗೆ ಜಂಟಿಯಾಗಿ ಶಿಲಾನ್ಯಾಸ ಮಾಡಿದ್ದರು.

## ಭಾರತೀಯ ಮುಸ್ಲಿಮರು ಮತಾಂತರಗೊಂಡ ಹಿಂದುಗಳು: ಗುಲಾಂ ನಬಿ



ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಗುಲಾಂ ನಬಿ ಆಜಾದ್ ಅವರು ಭಾರತದಲ್ಲಿನ ಧರ್ಮಗಳ ಐತಿಹಾಸಿಕ ಹಿನ್ನೆಲೆಯ ಕುರಿತು ಹೇಳಿಕೆಯೊಂದನ್ನು ನೀಡಿ ಹೊಸ ಚರ್ಚೆಯನ್ನು ಹುಟ್ಟುಹಾಕಿದ್ದಾರೆ. ವಿವಿಧ ಸಾಮಾಜಿಕ ಮಾಧ್ಯಮ ವೇದಿಕೆಗಳಲ್ಲಿ ಪ್ರಸಾರವಾದ ವೀಡಿಯೊದಲ್ಲಿ ಅವರು, "ಈ ರಾಷ್ಟ್ರದಲ್ಲಿ ಎಲ್ಲಾ ವ್ಯಕ್ತಿಗಳು ಆರಂಭದಲ್ಲಿ ಹಿಂದೂ ಧರ್ಮದೊಂದಿಗೆ ಸಂಬಂಧ ಹೊಂದಿದ್ದರು" ಎಂದು ತಮ್ಮ ದೃಷ್ಟಿಕೋನವನ್ನು ಹಂಚಿಕೊಂಡಿದ್ದಾರೆ.

ದೋಡಾ ಜಿಲ್ಲೆಯ ಥಾತ್ರಿ ಪ್ರದೇಶದಲ್ಲಿ ಸಭೆಯನ್ನುದ್ದೇಶಿಸಿ ಮಾತನಾಡಿದ ಆಜಾದ್, "ಸುಮಾರು 1,500 ವರ್ಷಗಳ ಹಿಂದೆ, ಇಸ್ಲಾಂ ಹೊರಹೊಮ್ಮಿತು. ಆದರೆ ಹಿಂದೂ ಧರ್ಮವು ಪ್ರಾಚೀನ ಬೇರುಗಳನ್ನು ಹೊಂದಿದೆ. ಕೆಲವು ಮುಸ್ಲಿಮರು ಬಾಹ್ಯ ಭೂಮಿಯಿಂದ ವಲಸೆ ಬಂದು ಮೊಘಲ್ ಸೈನ್ಯದಲ್ಲಿ ಭಾಗವಹಿಸಿರಬಹುದು. ಪರಿಣಾಮವಾಗಿ, ಹಿಂದೂ ಧರ್ಮದಿಂದ ಇಸ್ಲಾಂಗೆ ಮತಾಂತರ ಭಾರತ ಉಪಖಂಡದಲ್ಲಿ ಸಂಭವಿಸಿತು. ಕಾಶ್ಮೀರದ ಪ್ರಮುಖ ಜನಸಂಖ್ಯೆಯು ಆರು ಶತಮಾನಗಳ ಹಿಂದೆ ಇಸ್ಲಾಂಗೆ ಪರಿವರ್ತನೆಯಾಗಿದೆ, ಈ ಜನಸಂಖ್ಯೆ ಮೊದಲು ಕಾಶ್ಮೀರಿ ಪಂಡಿತರನ್ನು ಒಳಗೊಂಡಿತ್ತು" ಎಂದಿದ್ದಾರೆ.

"ಹಿಂದೂ, ಮುಸ್ಲಿಂ, ರಜಪೂತ, ಬ್ರಾಹ್ಮಣ, ದಲಿತ, ಕಾಶ್ಮೀರಿ ಅಥವಾ ಗುಜ್ಜರ್ ಎಂದು ಗುರುತಿಸಲ್ಪಟ್ಟರೂ ನಮ್ಮ ಸಾಮಾನ್ಯ ಮೂಲವು ನಮ್ಮನ್ನು ಈ ಭೂಮಿಗೆ ಜೋಡಿಸುತ್ತದೆ. ನಮ್ಮ ಪೂರ್ವಜರ ಸಂಪರ್ಕಗಳು ಇಲ್ಲಿ ಆಳವಾಗಿ ಹುದುಗಿದೆ ಮತ್ತು ಈ ಭೂಮಿಗೆ ನಾವು ಈ ಜೀವನವನ್ನು ಮೀರಿ ಹಿಂತಿರುಗಿಸಬೇಕಿದೆ" ಎಂದಿದ್ದಾರೆ.

## ಸುಳ್ಯ: ಅಂತಿಮ ಸಂಸ್ಕಾರದ ವೇಳೆ ಹಣದ ಪೋಲನ್ನು ತಡೆಯುವ ಮಾದರಿ ನಿರ್ಧಾರ

ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯದ ಅರಂತೋಡು ಗ್ರಾಮದ ಗೌಡ ಕುಟುಂಬಗಳ ಮುಖ್ಯಸ್ಥರು ಹಾಗೂ ಇನ್ನಿತರ ಪ್ರಮುಖರು ಸೇರಿ ಚರ್ಚಿಸಿ, ವಿಮರ್ಶಿಸಿ ಅಂತಿಮ ಸಂಸ್ಕಾರದ ಸಂದರ್ಭದಲ್ಲಿ ಕಂಡು ಬರುವ ಹಣದ ಪೋಲಾಗುವಿಕೆಗೆ ಕಡಿವಾಣ ಹಾಕಿ ಮಾದರಿ ನಿರ್ಧಾರವೊಂದನ್ನು ತೆಗೆದುಕೊಂಡಿದ್ದಾರೆ. ಅರಂತೋಡು ಗ್ರಾಮದ ಗೌಡ ಜನಾಂಗದ ಕುಟುಂಬದ ಮನೆಗಳಲ್ಲಿ ವ್ಯಕ್ತಿಯೋರ್ವ ಮರಣ ಹೊಂದಿದಾಗ ಸಂಬಂಧಿಕರು, ನೆಂಟರು, ಆಪ್ತರು-ಮಿತ್ರರು ಊರಿನವರು ಬಟ್ಟೆ, ಗಂಧದ ಹಾರ, ಹೂವಿನ ಮಾಲೆ, ಅಗರಬತ್ತಿ ಮೊದಲಾದ ವಸ್ತುಗಳನ್ನು ತಂದು ಶವಕ್ಕೆ ಒಪ್ಪಿಸಲಾಗುತ್ತದೆ. ಇದು ಪ್ರಯೋಜನವಿಲ್ಲದ ವ್ಯವಸ್ಥೆಯೆಂದು ಗುರುತಿಸಿದ ಸಮಾಜದ ಹಿರಿಯರು ಅನಾವಶ್ಯಕವಾಗಿ ಹಣದ ಪೋಲಾಗುವಿಕೆಯನ್ನು ತಡೆಯಲು ಅಂತಿಮ ನಮನ ಸಲ್ಲಿಸಲು ಬರುವ ಸಮಯದಲ್ಲಿ ವಸ್ತುಗಳ ಬದಲಾಗಿ ಅದೇ ಮೌಲ್ಯದ ಹಣವನ್ನು ಮೃತ ದೇಹದ ಹತ್ತಿರ ಬುಟ್ಟಿ/ಪಾತ್ರೆಯನ್ನು ಇಟ್ಟು ಅದರಲ್ಲಿ ಹಾಕುವುದರಿಂದ ಸಂಗ್ರಹಗೊಂಡ ಹಣವನ್ನು ಸಂಸ್ಕಾರದಿಂದ ಹಿಡಿದು ಮುಂದಿನ ಕಾರ್ಯಕ್ರಮಗಳಿಗೆ ಉಪಯೋಗಿಸುವುದರಿಂದ ಮೃತರ ಕುಟುಂಬದ ಖರ್ಚಿನ ಭಾರವನ್ನು ಕಡಿಮೆಗೊಳಿಸಲು ಸಾಧ್ಯವಿದೆ ಎಂದು ನಿಯಮವನ್ನು ತಂದಿದೆ. ಒಂದುವೇಳೆ ಹಾಗೆ ಸಂಗ್ರಹಗೊಂಡ ಹಣವನ್ನು ಮನೆಯವರು ಉಪಯೋಗಿಸಲು ಇಷ್ಟಪಡದಿದ್ದಲ್ಲಿ ಮೃತರ ಹೆಸರಲ್ಲಿ ವಿದ್ಯಾಸಂಸ್ಥೆಗಳಿಗೋ, ದೇವಸ್ಥಾನಗಳಿಗೂ ನಿಧಿಯಾಗಿ ನೀಡಬಹುದು ಎಂದು ಗ್ರಾಮ ಗೌಡ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು-560 004. ಮೊಬೈಲ್: 97391 83021

ಸಂಪಾದಕ-ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು-04. ಸಂಪಾದಕೀಯ : ಮೊ. 87225 52497 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು-18.